# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಆಗಸ್ಟ್ 15, 2022

ಸಂಪುಟ : 49 ಸಂಚಿಕೆ : 93 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com



Today the tricolors adorn the sky,
For even the earth can see the pride
we have for our country.

Celebrating 75 years of freedom with pride.

Happy Independence Day!

Advanced Cardiac Care Centre in Central Karnataka

Comprehensive Cardiac Care (Adult & Paediatric) | Expert Medical Team | State-of-the-art Cath Lab

World Class Cardiac Critical Care Unit | 1 lakh+ Cardiac Patients Treated | 24x7 Cardiac Emergency Service

ss ms NH

24/7 Cardiac Emergencies 9538 589633

SS Narayana Heart Centre, NH-4, Bypass Road, Davanagere



75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ನಮ್ಮೆಲ್ಲಾ ಆತ್ಮೀಯ ಬಂಧು-ಮಿತ್ರರಿಗೂ ಹಾಗೂ ಗ್ರಾಹಕರಿಗೂ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಶುಭಾಶಯಗಳು

ಎಸ್.ಕೆ. ವೀರಭದ್ರಪ್ಪ ಅಂಡ್ ಕಂ. ಪಿ.ಬಿ. ರೋಡ್. ದಾವಣಗೆರೆ



ಸ್ವಾತಂತ್ರ್ಯದ ಅಮೃತ ಮಹೋತ್ಸವ
ಹಾರ್ದಿಕ ಶುಭಾಶಯಗಳು



75

ಭರತ್ ಎಸ್. ಚನ್ನಗಿರಿ
ಪ್ರಧಾನ ಕಾರ್ಯದರ್ಶಿ,
ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ (ರಿ)
ದಾವಣಗೆರೆ.


॥ ಶ್ರೀ ಮಾರ್ಕಂಡೇಶ್ವರ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ವಾಸಿ
**ಶ್ರೀಮತಿ ಪಿ.ಸಿ. ಲಕ್ಷ್ಮಿದೇವಮ್ಮ**
**ಶ್ರೀ ಸಿದ್ದ ಪದ್ಮಶಾಲಿ ಚನ್ನಮಲ್ಲಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 03.08.2022ನೇ ಬುಧವಾರ
ನಮ್ಮ ಮಗಳು ಮತ್ತು ಅಳಿಯ
**ಶ್ರೀಮತಿ ಪಿ.ಸಿ. ಶೋಭರಾಣಿ**
**ಶ್ರೀ ಜಯರಾಮುಲು ತಾಡೂರು**
ನಿವೃತ್ತ ಪ್ರಾಂಶುಪಾಲರು
ಇವರುಗಳು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ಕೈಲಾಸ ಸಮಾರಾಧನೆ "ಯನ್ನು
ದಿನಾಂಕ : 15.08.2022ನೇ ಸೋಮವಾರ ಮಧ್ಯಾಹ್ನ 12.30 ಗಂಟೆಗೆ, ಸುಕೃತೀಂದ್ರ ಕಲಾಮಂದಿರ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮಾಲೀಕರು - ಶ್ರೀ ಮಾರುತಿ ಟೆಕ್ಸ್‌ಟೈಲ್ & ಗಾರ್ಮೆಂಟ್ಸ್
ಹದಡಿ ರೋಡ್, ದಾವಣಗೆರೆ ಮತ್ತು ಸಿಬ್ಬಂಗದಿ ವರ್ಗ ಹಾಗೂ ಬಂಧು-ಮಿತ್ರರು


JOB OFFER

SOFTWARE DEVELPOERS
Minimum Knowledge about
1) PHP 2) HTML
3) J Query 4) C S S
5) Java Script
Minimum one year Experience
Contact No.
94498 36164
Interview Place

OPTICAL PARADISE
AVK College Road,
Davangere - 577 002



ಸ್ವಾತಂತ್ರ್ಯದ ಅಮೃತ ಮಹೋತ್ಸವ

75 आज़ादी का अमृत महोत्सव



ಬ್ರಿಟಿಷರ ಸರ್ವಾಧಿಕಾರದ ವಿರುದ್ಧ ಶಾಂತಿಯುತ ಹೋರಾಟ ನಡೆಸಿ
ಸ್ವಾತಂತ್ರ್ಯ ಪಡೆದ ಪುಣ್ಯಭೂಮಿ ಭಾರತ,
ಧಾರ್ಮಿಕ, ಶ್ರದ್ಧಾ ಭಕ್ತಿಯ ನಾಡು,,ಸರ್ವಧರ್ಮ ಸಮನ್ವಯದ ನೆಲೆಬೀಡು..
ಈ ಪುಣ್ಯಭೂಮಿಯಲ್ಲಿ ಜನಿಸಿದ ನಾವೇ ಧನ್ಯ.
ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಪಾಲ್ಗೊಂಡ ರೈತ-ಕಾರ್ಮಿಕರು,
ವಿದ್ಯಾರ್ಥಿ-ಯುವಜನರು, ಮಹಿಳೆಯರು, ಲೇಖಕರು, ಕವಿಗಳು ಈ ನಾಡಿನ
ಸ್ವಾತಂತ್ರ್ಯ ಹೋರಾಟಗಾರರ ನೇತೃತ್ವದಲ್ಲಿ ಬ್ರಿಟಿಷರನ್ನ ಭಾರತದಿಂದ
ತೊಲಗಿಸಿ ಸ್ವಾತಂತ್ರ್ಯ ಪಡೆದ "ಅಮೃತ ಮಹೋತ್ಸವ" ವರ್ಷ.
ಭಾರತ ಮಾತೆಯ ಹೆಮ್ಮೆಯ ಪುತ್ರರಾದ ನಾವುಗಳು ನಾಡಿನ
ಐಕ್ಯತೆ ಸಮಗ್ರತೆ, ಅಭಿವೃದ್ಧಿಗೆ ಶ್ರಮಿಸೋಣ.
ಭಾರತವನ್ನು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಕ್ಷೇತ್ರದಲ್ಲಿ
ಉನ್ನತ ಸ್ಥಾನದಲ್ಲಿರಿಸಲು ತಾಯ್ನಾಡಿನ ಸರ್ಕಾರದೊಂದಿಗೆ ಕೈ ಜೋಡಿಸೋಣ...

ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು



ಕೆ.ಬಿ. ಕೊಟ್ರೇಶ್
ಅಧ್ಯಕ್ಷರು, ಎ.ಕೆ.ಫೌಂಡೇಶನ್, ದಾವಣಗೆರೆ.

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ಪೂರ್ವ 40x40, ಡುಪ್ಲೆಕ್ಸ್, ಸಿದ್ದವೀರಪ್ಪ ಬಡಾವಣೆ ಉತ್ತರ 30x40 ಡುಪ್ಲೆಕ್ಸ್, ಶಿವ-ಪಾರ್ವತಿ ಬಡಾವಣೆ ಉತ್ತರ 30x46 ಕೆಳಗೆ 2BHK ಮೇಲೆ Single BHK, ವಾಜಪೇಯಿ ಬಡಾವಣೆ ಪೂರ್ವ30x40 ಡುಪ್ಲೆಕ್ಸ್
ಐಗೂರು ವಿಜಯಕುಮಾರ
99457 02495

**ಮನೆ ಮಾರಾಟಕ್ಕೆ (Duplex)**
ಸರಸ್ವತಿ ಬಡಾವಣೆಯಲ್ಲಿ (36 ಲಕ್ಷಕ್ಕೆ) 750 ಅಡಿಗಳಲ್ಲಿ 12+21/2x45 ಅಂದಾಜು ಡ್ಯೂಪ್ಲೆಕ್ಸ್ 3 ಬೆಡ್ ರೂಂವುಳ್ಳ ಪಶ್ಚಿಮದ ಮನೆ, ಪಾರ್ಕ್ ಎದುರು
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಸೈಟುಗಳು ಮಾರಾಟಕ್ಕಿವೆ**
JH ಪಟೇಲ್ ಬಡಾವಣೆಯಲ್ಲಿ ಶಿವ-ಪಾರ್ವತಿ ಲೇಔಟ್ ನಲ್ಲಿ 50x80 North 60x84 East, 35x75 North 40ft ರೋಡ್‌ಗೆ 20x50 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 40 ಅಡಿ ರಸ್ತೆಗೆ, 40x50 ಪಶ್ಚಿಮ, ಉತ್ತರ ಕಾರ್ನರ್ 30x50 ಪಶ್ಚಿಮ ದಕ್ಷಿಣ ಕಾರ್ನರ್, ಶಿವ-ಪಾರ್ವತಿ ಬಡಾವಣೆಯಲ್ಲಿ ಯೂರೋ ಕಿಡ್ಸ್ ಸ್ಕೂಲ್ ಹತ್ತಿರ, 30x40 ಪಶ್ಚಿಮ ಅಕ್ಕ ಪಕ್ಕ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್ ಸಂಭ್ರಮ್ ಹೋಟೆಲ್ ಹಿಂಭಾಗ ಪಶ್ಚಿಮ 40x85, ಉತ್ತರ 50x100, 60 ಅಡಿ ರಸ್ತೆ ಪೂರ್ವ 50x80 (Commercial) ಪೂರ್ವ-ದಕ್ಷಿಣ (60 ಅಡಿ ರಸ್ತೆ) 30x50 ವಾಜಪೇಯಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 50x50
ಐಗೂರು ವಿಜಯಕುಮಾರ
99457 02495

**ಮಾರಾಟಕ್ಕೆ**
ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 (ಪೂರ್ವ) ಮನೆ, ಶಿವಕುಮಾರ ಸ್ವಾಮಿ ಬಡಾವಣೆಯ 30x40 (ಪಶ್ಚಿಮ) ಸೈಟು, ಸರಸ್ವತಿ ನಗರದಲ್ಲಿ 20x40 (ಉತ್ತರ) ಡಬಲ್ ಫ್ಲೋರ್ ಮನೆ, ಜಯನಗರದಲ್ಲಿ 30x50 (ಪೂರ್ವ) 3 BHK ಮನೆ ಚಿಕ್ಕಮ್ಮಣ್ಣಿ ಲೇಔಟ್‌ನಲ್ಲಿ 20x30 (ಉತ್ತರ) ಸೈಟು ಮಾರಾಟಕ್ಕಿದೆ.
98804 40602

**ಬೇಕಾಗಿದ್ದಾರೆ**
Auditor Office /Accountant Officeನಲ್ಲಿ ಕೆಲಸ ಮಾಡಿದ ಅನುಭವವಿರುವ Male / Female Candidate Full time ಕೆಲಸ ಮಾಡಲು ಬೇಕಾಗಿದ್ದಾರೆ.
ಮೊ. 80882- 10419

**SERVICES**
1. EC 2.Khatha Extract 3.Khatha Change 4.Loans 5.Registration
Call: 96325 54524

**ಬೇಕಾಗಿದ್ದಾರೆ**
ದಾವಣಗೆರೆನಲ್ಲಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ, ವಸತಿ, ಇಎಸ್ಐ ಸೌಲಭ್ಯವಿದೆ.
SAFAJ ಸೆಕ್ಯೂರಿಟಿ ಸರ್ವಿಸ್
91130 53483, 88678 53961

**ಸೈಟುಗಳು ಮಾರಾಟಕ್ಕಿವೆ**
PB ರೋಡ್‌ಗೆ ಹತ್ತಿರ ಶನೇಶ್ವರ ದೇವಸ್ಥಾನದ ಹಿಂಭಾಗ 30x40 West, 30x40 West (ಅಕ್ಕ ಪಕ್ಕ) ರೇಟ್-1750
ಐನಳ್ಳಿ ಚನ್ನಬಸಪ್ಪ
REAL ESTET AGENT
99166 12110

**WANTED**
to work as 10 Executive / Team Leaders without target, who are ready to travel to different districts, youth under age 30, preference for people who know Bangalore area very well. Qualification : Any degree and candidate must know English fluency.
M : 80882-10419

**Wanted Receptionist**
E-mail correspondence with fluency in English for Telecalling, Wanted Female Candidates with knowledge of PowerPoint Presentation.
Contact : 93530-55008

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡೀಸ್ ಬೇಕಾಗಿದ್ದಾರೆ. ಕಲಿಯುವವರಿಗೂ ಆದ್ಯತೆ. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
94838 62779

**ಬೇಕಾಗಿದ್ದಾರೆ**
ಕಂಪ್ಯೂಟರ್ ಬಿಲ್ಲಿಂಗ್ ಸೆಕ್ಷನ್ ಗೆ ಹಾಗೂ ಬೇಕರಿ ಕೌಂಟರ್ ಗೆ ಅನುಭವವುಳ್ಳ ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
ಎಸ್.ಎಸ್ ಸೂಪರ್ ಮಾರ್ಕೆಟ್
ಕಾಳಿಕಾದೇವಿ ಸರ್ಕಲ್
ಹೈಟೆಕ್ ಹಾಸ್ಪಿಟಲ್ ರೋಡ್, ದಾವಣಗೆರೆ.
98441 07062

**ಬಾಡಿಗೆಗೆ ಇದೆ**
ಹೊಸ ವಾಣಿಜ್ಯ ಕಟ್ಟಡ (9500 sqft) ದಾವಣಗೆರೆಯ ಹದಡಿ ರಸ್ತೆ ಯಲ್ಲಿ Celler Ground, 1st & 2nd Floors, Lift (10M) Wash Rooms (L&G), Parking
94806 52219

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಆಹಾರ ಖರೀದಿಸಿ ಹಣ ಗಳಿಸಿ**
ಕೇವಲ 8100 ರೂ ಗಳ ಆಹಾರದ ಉತ್ಪನ್ನಗಳನ್ನು ಬಳಸಿರಿ ಪಡೆಯಿರಿ 8,85,720 /- ರೂ ಕ್ಯಾಷ್ ಬ್ಯಾಕ್ (ಟಿ&ಸಿ)
No-Joining, No-BV, PV
AUTO FILL COMPANY
86602 35013

**SHOPS FOR RENT**
(With Wash Room Facility)
N.R. ROAD, DAVANGERE.
94483 69523

**ನಿವೇಶನ ಮಾರಾಟಕ್ಕಿದೆ**
ಆವರಗೆರೆ ಬಳಿಯ ಉತ್ತಮ್ ಚಂದ್ ಬಡಾವಣೆ ರಿಂಗ್ ರಸ್ತೆಯ ಉತ್ತರ ಭಾಗದಲ್ಲಿ ಪಶ್ಚಿಮ ದಿಕ್ಕಿನ 30x40 ಅಳತೆಯ ನಿವೇಶನ ಮಾರಾಟಕ್ಕಿದೆ
80734 89338

**ಮನೆ ಬಾಡಿಗೆಗೆ ಇದೆ**
KTJ ನಗರ 10ನೇ ಕ್ರಾಸ್ 3ನೇ ಮೇನ್ 1 ಬೆಡ್ ರೂಂ ಮನೆ ಮೊದಲನೇ ಮಹಡಿ. ಬೋರ್‌ವೆಲ್ ವಾಟರ್ ಹಾಗೂ ನಲ್ಲಿ ನೀರಿನ ಸೌಲಭ್ಯ ಇದೆ. ಸಂಪರ್ಕಿಸಿ:
98457 84338
96111 74288

**1 BHK ಮನೆ ಬಾಡಿಗೆ ಇದೆ**
2ನೇ ಫ್ಲೋರ್ ನಲ್ಲಿ 1BHK ಮನೆ ಬಾಡಿಗೆಗೆ ಇದೆ. 3425/22 4th main 11th cross S S layout B Block Davanagere, ನಂಜುಂಡೇಶ್ವರ ಪ್ರಾವಿಜನ್ ಸ್ಟೋರ್ ಹತ್ತಿರ
96320 60242, 96638 28202

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**ಮೊಬೈಲ್ ಶಾಪ್ ಬಾಡಿಗೆಗೆ ಇದೆ**
ನಗರದ ಪಿ.ಜೆ ಬಡಾವಣೆ, ಚೇತನ ಹೋಟೆಲ್ ರಸ್ತೆಯಲ್ಲಿ ಬಿ.ಎಸ್ಸಿ, ಮೆನ್ಸ್ ಹತ್ತಿರ, 11x16 ಅಳತೆಯ ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಇರುವ ಮಳಿಗೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ :
98440 15114, 83100 73553

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, B.Ed ಮಾಡಿದ ಶಿಕ್ಷಕಿಯರು ಬೇಕಾಗಿದ್ದಾರೆ.
ವಿಶ್ವಜ್ಞಾನ್ ಪಬ್ಲಿಕ್ ಶಾಲೆ
S O G ಕಾಲೋನಿ, ದಾವಣಗೆರೆ
96638 69555

**ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಬಡಾವಣೆ ಪೂರ್ವ 40x60, ಉತ್ತರ-ಪಶ್ಚಿಮ ಕಾರ್ನರ್ 30x40 ಮೋತಿ ಲೇಔಟ್ ಪಕ್ಕ (By Pass) ಪೂರ್ವ ಅಕ್ಕ-ಪಕ್ಕ 30x45, ಪಶ್ಚಿಮ ಅಕ್ಕ-ಪಕ್ಕ 30x45
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕಿದೆ**
ಶಾಮನೂರಿನ ಪೋದಾರ್ (Podar) School ಹತ್ತಿರ 20x30 ಸೈಟ್ ಮಾರಾಟಕ್ಕಿದೆ (ದಕ್ಷಿಣ) ಸಂಪರ್ಕಿಸಿ.
80731 78139
95918 29780

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಪೇಷೆಂಟ್ ನರ್ಸಿಂಗ್ -2 ವರ್ಷ
NTC : ನರ್ಸರಿ ಟೀಚರ್ಸ್ ಟ್ರೇನಿಂಗ್
ಗಂಗೋತ್ರಿ ಎಜುಕೇಶನಲ್ ಟ್ರಸ್ಟ್. (ರಿ)
ಲಾಯರ್ ರೋಡ್ ದಾವಣಗೆರೆ.
ಬೇಕಾಗಿದ್ದಾರೆ
ಮಹಿಳಾ ರಿಸೆಪ್ಷನ್. ವೇತನ : 5000 /-
8660235013

**ಬಾಡಿಗೆಗೆ ಇದೆ**
2BHK ಗ್ರೌಂಡ್ ಫ್ಲೋರ್ ಮನೆ ವಿದ್ಯಾನಗರದ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಹಿಂದೆ 30x50Ground Floor Commercial Hall ಕಾಫಿ ಡೇ ಪಕ್ಕ ವಿದ್ಯಾನಗರ
99725 77991

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
KSS SOLUTION CSC
ಸಂಬಳ: 4000 To 6000 ವಯೋಮಿತಿ: 20-25 ವರ್ಷದ ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್ ಲೇಔಟ್ 'ಬಿ' ಬ್ಲಾಕ್ ದಾವಣಗೆರೆ
72045 42910
(Time:10am to 6pm)

**ಸೈಟ್ ಮಾರಾಟಕ್ಕಿದೆ**
30x40 ಪೂರ್ವ Good Location MNK ಮಹಾಲಕ್ಷ್ಮಿ ಬಡಾವಣೆ ಉತ್ತಮ ಚಂದ್ ಲೇಔಟ್ ಪಕ್ಕ ಆವರಗೆರೆ ದಾವಣಗೆರೆ
98452 95326

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**Required**
Require of Telecallers for DS Agency office at loan section. Qualifications: Any Degree with good communication. Interested may call at
63614 28175

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. Rs.1099sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30×40, 30×50
98441 24217, 94481 55202
86603 11021, 93431 10009

**ಜಮೀನು ಲೀಸ್/ ಬಾಡಿಗೆಗೆ ಬೇಕಾಗಿದೆ**
ಹಾಲಿನ ಡೈರಿ ಮತ್ತು ಕುರಿ ಸಾಕಾಣಿಕೆ ಮಾಡಲು ದಾವಣಗೆರೆ ಯಿಂದ 20 ಕಿ.ಮೀ ಒಳಗಿರುವ 5 ರಿಂದ 10 ಎಕರೆ ಜಮೀನು ಲೀಸ್ ಗೆ ಅಥವಾ ಬಾಡಿಗೆಗೆ ಬೇಕಾಗಿದೆ ಸಂಪರ್ಕಿಸಿ:
ಮೊ:9742920446

**ಮನೆ ಬಾಡಿಗೆಗೆ**
ವಿಜಯ ನಗರ ಬಡಾವಣೆ (Near RTO Office) ಹತ್ತಿರ 2nd main 9th Cross 2nd Floor ಡಬಲ್ ಬೆಡ್ ರೂಂ
99720 49030
96200 20530

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd.,
www.doctorsquery.com


# ರೈಲು ನಿಲ್ದಾಣದಲ್ಲಿ ದೇಶ ವಿಭಜನೆಯ ದುರಂತ ಕ್ಷಣಗಳ ಚಿತ್ರ ಪ್ರದರ್ಶನ




ಹಾವೇರಿ, ಆ.14- ದೇಶ ಇಬ್ಭಾಗವಾದ ದುರಂತ ಕಥೆಯ ಕ್ಷಣಗಳನ್ನು ಚಿತ್ರದ ಮೂಲಕ ಬಿಂಬಿಸುವ ಎರಡು ದಿನಗಳ ಅಪರೂಪದ ಚಿತ್ರಪ್ರದರ್ಶನವೊಂದು ಹಾವೇರಿಯ ಶ್ರೀ ಮೈಲಾರ ಮಹಾದೇವ ರೈಲು ನಿಲ್ದಾಣದಲ್ಲಿ ಇಂದಿನಿಂದ ಆರಂಭಗೊಂಡಿದೆ.

ಇಂದು ಮುಂಜಾನೆ ಮಾಜಿ ಸೈನಿಕ ನಿಂಗನಗೌಡ ಸೋಮನಗೌಡ ಗುರುನಗೌಡ್ರ ಅವರು ಪ್ರದರ್ಶನ ವನ್ನು ಉದ್ಘಾಟಿಸಿದರಲ್ಲದೆ, ಪ್ರದರ್ಶನವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಉಪ್ಪಿನ ಸತ್ಯಾಗ್ರಹದಲ್ಲಿ ಗಾಂಧೀಜಿಯವರೊಡನೆ ಕರ್ನಾಟಕದಿಂದ ಭಾಗಿಯಾಗಿದ್ದ ಏಕೈಕ ಸತ್ಯಾಗ್ರಹಿ, ಇಲ್ಲಿಗೆ ಸಮೀಪದ ಮೋಟೆಬೆನ್ನೂರಿನ ಅಪ್ರತಿಮ ಯುವ ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹಾದೇವರು ಹೊಸರಿತ್ತಿಯಲ್ಲಿ ಆಂಗ್ಲರ ಗುಂಡಿಗೆ ಬಲಿಯಾಗಿ ಹುತಾತ್ಮರಾಗಿದ್ದು, ಅವರ ಗೌರವಾರ್ಥ ಹಾವೇರಿ ನಿಲ್ದಾಣಕ್ಕೆ ಮಹಾದೇವರ ಹೆಸರನ್ನಿಡಲಾಗಿದೆ.

ಚಿತ್ರ ಪ್ರದರ್ಶನ ಇಂದು ಮತ್ತು ನಾಳೆ ಎರಡು ದಿನಗಳು ನಡೆಯಲಿದ್ದು, ಇಂದಿನ ಸಮಾರಂಭದಲ್ಲಿ ನಿಲ್ದಾಣ ವ್ಯವಸ್ಥಾಪಕ ಬಿ. ಕೆ.ಸಿಂಗ್ ಹಾಗೂ ಮುಖ್ಯ ವಾಣಿಜ್ಯ ಇನ್‌ಸ್ಪೆಕ್ಟರ್ ಸೋಮಶೇಖರ್ ಹಾಜರಿದ್ದರು.

ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರದರ್ಶನ ವೀಕ್ಷಿಸುವ ಮೂಲಕ ಸದುಪಯೋಗ ಪಡೆಯಲು ಮುಖ್ಯ ವಾಣಿಜ್ಯ ಮೇಲ್ವಿಚಾರಕ ಎ.ಕೆ. ಶಂಕರಾನಂದ ಮನವಿ ಮಾಡಿದ್ದಾರೆ.

**ದಾವಣಗೆರೆಯಲ್ಲಿಯೂ ಪ್ರದರ್ಶನ :** ಇದೇ ರೀತಿಯ ಚಿತ್ರ ಪ್ರದರ್ಶನ ದಾವಣಗೆರೆ ರೈಲು ನಿಲ್ದಾಣದಲ್ಲಿಯೂ ವ್ಯವಸ್ಥೆಗೊಳಿಸಿದ್ದು, ಸಾರ್ವಜನಿಕರು ಇದರ ಉಪಯೋಗ ಪಡೆಯಬೇಕೆಂದು ಮುಖ್ಯ ವಾಣಿಜ್ಯ ಮೇಲ್ವಿಚಾರಕ ರಾಕೇಶ್ ಬಾಬರ್ ಹಾಗೂ ಮುಖ್ಯ ವಾಣಿಜ್ಯ ಇನ್‌ಸ್ಪೆಕ್ಟರ್ ಗಣೇಶ್ ರಾವ್ ಕೋರಿದ್ದಾರೆ.

## ಹಳೇ ಕುಂದುವಾಡದಲ್ಲಿ ಇಂದು ಕರಿಬಸವೇಶ್ವರ ಸ್ವಾಮಿ ಪುಣ್ಯಾರಾಧನೆ



ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಾರಾಧನೆ ಮತ್ತು ಮೂರನೇ ಶ್ರಾವಣ ಸೋಮವಾರ ಪ್ರಯುಕ್ತ ಇಂದು ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿವೆ.

ಮುಂಜಾನೆ 6 ರಿಂದ ಅಘೋರ ರುದ್ರ ಹೋಮ, ಏಕಾದಶ ರುದ್ರಾಭಿಷೇಕ ಯುಕ್ತ ಪೂಜೆ, ನಂತರ ಹೋಮ- ಹವನ, ಅಲಂಕಾರ ಕಾರ್ಯಕ್ರಮ ನಡೆಯಲಿದೆ. ಹೋಮದ ನಂತರದ ಪೂರ್ಣಾಹುತಿ ಪೂಜಾ ಕಾರ್ಯಕ್ರಮಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ವಿಶೇಷ ಆಹ್ವಾನಿತರಾಗಿ ಆಗಮಿಸುವರು.

ಮಧ್ಯಾಹ್ನ 1ಕ್ಕೆ ಹೋಳಿಗೆ ಸಿಹಿಯ ಪ್ರಸಾದ ವಿನಿಯೋಗ ಮಾಡಲಾಗುವುದು. ಸಂಜೆ 7 ಗಂಟೆಗೆ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಬೆಳ್ಳಿ ಮೂರ್ತಿ ಪಲ್ಲಕ್ಕಿಯ ಉತ್ಸವ ಜರುಗಲಿದೆ ಎಂದು ಟ್ರಸ್ಟ್ ನ ಧರ್ಮಾಧಿಕಾರಿ ರಾಜಣ್ಣ ತಿಳಿಸಿದ್ದಾರೆ.

## ನಗರದ ನಟಿ ಭಾವನಾ ಅಭಿನಯದ 'ಶಾಂತಿ' ಚಲನಚಿತ್ರ ಪ್ರದರ್ಶನ ಇಂದು

ಎ.ಆರ್ ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಕನ್ನಡ ವಿಭಾಗದ ಕನ್ನಡ ಸಾಹಿತ್ಯ ವೇದಿಕೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ವಿಶೇಷ ಅಮೃತ ಭಾರತಿಗೆ ಕನ್ನಡದಾರತಿ ಪ್ರಯುಕ್ತವಾಗಿ ನಾಡೋಜ ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ ಗಿನ್ನಿಸ್ ದಾಖಲೆಯ ಏಕವ್ಯಕ್ತಿ ಅಭಿನಯದ 'ಶಾಂತಿ' ಚಲನ ಚಿತ್ರ ಪ್ರದರ್ಶನವನ್ನು ಇಂದು ಬೆಳಿಗ್ಗೆ 9 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಚಿತ್ರನಟಿ ಭಾವನ ಅಭಿನಯಿಸಿದ್ದು, ಇದರ ಉದ್ಘಾಟನೆಯನ್ನು ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ.ಎಸ್. ಬಸವರಾಜಪ್ಪ ಅವರು ನೆರವೇರಿಸಲಿದ್ದಾರೆ ಎಂದು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್. ತಿಪ್ಪೇಸ್ವಾಮಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕೃಷ್ಣ ವೇಷಭೂಷಣ ಸ್ಪರ್ಧೆ

ಶ್ರೀ ಹಯಗ್ರೀವ ದೈವಜ್ಞ ಯುವ ವೇದಿಕೆ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಇಂದು ಮಧ್ಯಾಹ್ನ 3 ಗಂಟೆಗೆ ದೈವಜ್ಞ ಕಲ್ಯಾಣ ಮಂಟಪದಲ್ಲಿ ಶ್ರೀ ಕೃಷ್ಣ ವೇಷಭೂಷಣ ಸ್ಪರ್ಧೆ ನಡೆಯಲಿದೆ. 1 ರಿಂದ 5 ಮತ್ತು 6ರಿಂದ 10 ವರ್ಷದ ಮಕ್ಕಳ ಹೆಸರನ್ನು ಸ್ಪರ್ಧೆಯ ದಿನವೇ ನೋಂದಾಯಿಸಬಹುದು. ವಿವರಕ್ಕೆ ಯೋಗರಾಜ್ ಅಣ್ವೇಕರ್ (98442 65669) ಅವರನ್ನು ಸಂಪರ್ಕಿಸಬಹುದು.

## ಕೆ.ಎನ್. ಹಳ್ಳಿ : ತಿರಂಗಾ ಜಾಗೃತಿ



ಮಲೇಬೆನ್ನೂರು, ಆ.14- ಕೆ.ಎನ್. ಹಳ್ಳಿ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ದೇವಸ್ಥಾನ ಮತ್ತು ಬಸ್ ನಿಲ್ದಾಣವನ್ನು ಸ್ವಚ್ಛತೆ ಮಾಡಿ, ಬಣ್ಣ ಬಳಿದು ಹೊಸ ರೂಪ ನೀಡಲಾಯಿತು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಡಾ. ವೀರೇಂದ್ರ ಹೆಗ್ಗಡೆ ಅವರ ಆಶಯದಂತೆ ರಾಜ್ಯದಲ್ಲಿ ಎಲ್ಲಾ ಕಡೆ ದೇವಸ್ಥಾನ, ಶಾಲೆ, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಶ್ರದ್ಧಾ ಕೇಂದ್ರಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ಕೈಗೊಂಡಿರುವುದಾಗಿ ಹೊಳೆಸಿರಿಗೆರೆ ವಲಯ ಮೇಲ್ವಿಚಾರಕಿ ಶ್ರೀಮತಿ ನಂದಾ, ಜ್ಞಾನ ವಿಕಾಸ ಕೇಂದ್ರದ ಸಮನ್ವಯಾಧಿಕಾರಿ ರಕ್ಷಿತಾ ತಿಳಿಸಿದರು.

ಇದೇ ವೇಳೆ ಗ್ರಾಮದಲ್ಲಿ ಹರ್ ಘರ್ ತಿರಂಗಾ ಜಾಗೃತಿ ಜಾಥಾವನ್ನೂ ನಡೆಸಲಾಯಿತು. ಗ್ರಾಮದ ಮುಖಂಡ ಕೆ.ಹೆಚ್. ನಾಗನಗೌಡ, ರೈತ ಸಂಘದ ಪ್ರಭುಗೌಡ, ಒಕ್ಕೂಟದ ಅಧ್ಯಕ್ಷ ನಟರಾಜ್, ಹನುಮಂತಗೌಡ್ರು, ಅಕ್ಕಮ್ಮ ಮತ್ತು ಪೊಲೀಸ್ ಸಿಬ್ಬಂದಿಗಳು, ಗ್ರಾಮಸ್ಥರು, ಸೇವಾ ಪ್ರತಿನಿಧಿಗಳು ಭಾಗವಹಿಸಿದ್ದರು.


## ಇಂದು ವರದಶಂಕರ ಪೂಜೆ

ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಮಹಿಳಾ ಘಟಕ ದಿಂದ ಲೋಕ ಕಲ್ಯಾಣಾರ್ಥ ವರದಶಂಕರ ಪೂಜಾ ಕಾರ್ಯಕ್ರಮವು ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಇಂದು ನಡೆಯಲಿದೆ.

ಅಂದು ಬೆಳಿಗ್ಗೆ 9.30 ರಿಂದ ಪೂಜಾ ಕಾರ್ಯಗಳು ನಡೆಯಲಿದ್ದು, ಮಧ್ಯಾಹ್ನ 12 ರಿಂದ ನಡೆಯುವ ಸಭಾ ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಶ್ರೀಗಳು ವಹಿಸುವರು. ಕಾರ್ಯಕ್ರಮ ವನ್ನು ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದು, ಸಭಾದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶುಭಾ ಐನಳ್ಳಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರಾದ ಎಸ್.ಎಸ್. ಗಣೇಶ್, ಉದ್ಯಮಿ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಎಸ್.ಎಸ್. ಕೇರ್ ಟ್ರಸ್ಟ್ ನಿರ್ದೇಶಕರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಸದಸ್ಯೆ ಜ್ಯೋತಿ ಜಂಬಗಿ, ಪುಷ್ಪ ವಾಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

# ಓ. ನಾಗೇಂದ್ರಪ್ಪ ನಿಧನ



ದಾವಣಗೆರೆ ಶ್ರೀನಿವಾಸ ನಗರ ವಾಸಿ,
ಹೊನ್ನಾಳಿಯ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ

**ಶ್ರೀ ಓ. ನಾಗೇಂದ್ರಪ್ಪ**

ಅವರು ದಿನಾಂಕ 14-8-2022ರ ಭಾನುವಾರ ಬೆಳಿಗ್ಗೆ 7-00 ಗಂಟೆಗೆ ಬೆಂಗಳೂರಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಅವರಿಗೆ 76 ವರ್ಷ ವಯಸ್ಸಾಗಿತ್ತು.
ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಅಂತ್ಯಕ್ರಿಯೆಯು ದಿನಾಂಕ : 15-08-2022ರ ಸೋಮವಾರ ಮಧ್ಯಾಹ್ನ 12-00 ಗಂಟೆಗೆ ಸ್ವಗ್ರಾಮ ಚನ್ನಗಿರಿ ತಾಲ್ಲೂಕು, ಚಿರಡೋಣಿ ಗ್ರಾಮದಲ್ಲಿ ನೆರವೇರಿಸಲಾಗುವುದು.
ಪಾರ್ಥೀವ ಶರೀರವನ್ನು ಬೆಂಗಳೂರಿನಿಂದ ನೇರ ಚಿರಡೋಣಿ ಗ್ರಾಮಕ್ಕೆ ತರಲಾಗುವುದು.

ದುಃಖತಪ್ತ ಕುಟುಂಬವರ್ಗ. ಮೊ : 9482311589, 9148754233


**ADMISSION OPEN 2022**
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**ಮನೆ ಲೀಸ್‌ಗೆ ಇದೆ**
ಶಿವಕುಮಾರ ಬಡಾವಣೆ 2ನೇ ಹಂತ ಸಂಜೀವಿನಿ ಆಂಜನೇಯ ದೇವಸ್ಥಾನ ಹಿಂಭಾಗ ಡಬಲ್ ಬೆಡ್ ರೂಂ ಇರುವ ಮನೆ ಲೀಸ್‌ಗೆ ಇದೆ.
94481 78021
99017 70997

**ಕಾರ್ ಶೋರೂಂಗಳಿಗೆ ಡ್ರೈವರ್ ಅಗತ್ಯವಿದೆಯೇ ?**
ಶೋರೂಂ ಅಥವಾ ಗ್ಯಾರೇಜ್‌ನವರಿಗೆ ಡ್ರೈವರ್‌ಗಳು ಗ್ರಾಹಕರ ಕಾರನ್ನು ಅವರ ಮನೆಯಿಂದ ಅಥವಾ ನಿಮ್ಮ ಸೇವಾ ಕೇಂದ್ರದಿಂದ ಅವರ ಮನೆಗೆ ಕಾರನ್ನು ತಲುಪಿಸಲು ಡ್ರೈವರ್ ಬೇಕಾದಲ್ಲಿ ಸಂಪರ್ಕಿಸಿ:
ಜಿ.ಸಿ.ಎಸ್ (ಹಿರೇಮಠ)
90365 21789

**ಹುಡುಗರು ಬೇಕಾಗಿದ್ದಾರೆ**
ಸಿದ್ದೇಶ್ವರ ಪ್ರಾವಿಜನ್ ಸ್ಟೋರ್ ವಿದ್ಯಾನಗರ ಮೇನ್ ರೋಡ್ ನುರಿತ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
93430 37565

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ


ಶ್ರೀ ವೀರಭದ್ರೇಶ್ವರ ಪ್ರಸನ್ನ

**ಪ್ರಥಮ ವರ್ಷದ ಪುಣ್ಯಸ್ಮರಣೆ ಆಹ್ವಾನ ಪತ್ರಿಕೆ**



ಶ್ರೀಮತಿ ಶಾಂತಮ್ಮ ಸಂಗಪ್ಪಯ್ಯ ಪಟೇಲ್ ಮತ್ತು ಮಕ್ಕಳು, ಕಿರುವಾಡಿ ಲೇಔಟ್, ಕೆ.ಬಿ.ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪತಿಯವರಾದ

**ಲಿಂ|| ಶ್ರೀ ಸಂಗಪ್ಪಯ್ಯ ಪಟೇಲ್**
(ಗೌಡರ ಮನೆ, ತರಲಘಟ್ಟ ಗ್ರಾಮ, ಶಿಕಾರಿಪುರ, ತಾ.)

ಇವರ **ಪ್ರಥಮ ವರ್ಷದ ಪುಣ್ಯಸ್ಮರಣೆ**
ಕಾರ್ಯಕ್ರಮವನ್ನು ದಿನಾಂಕ: 15-08-2022ನೇ ಸೋಮವಾರ ಮಧ್ಯಾಹ್ನ 12.30 ಗಂಟೆಗೆ ಏರ್ಪಡಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.
ಸ್ಥಳ: ಶ್ರೀ ಸದ್ಯೋಜಾತ ಶಿವಾಚಾರ್ಯ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

ಇಂತಿ ದುಃಖತಪ್ತ : **ಧರ್ಮಪತ್ನಿ ಶ್ರೀಮತಿ ಶಾಂತಮ್ಮ ಸಂಗಪ್ಪಯ್ಯ ಪಟೇಲ್ ಮತ್ತು ಕುಟುಂಬದವರು. ಕಿರುವಾಡಿ ಲೇಔಟ್, ಕೆ.ಬಿ. ಬಡಾವಣೆ ದಾವಣಗೆರೆ**
ಮೊ : 99863 25181, 98863 31518

## ನಗರದಲ್ಲಿ ಇಂದು ವಿವಿಧ ಸ್ಪರ್ಧೆಗಳು

ಕೆ.ಟಿ.ಜೆ. ನಗರದ 3ನೇ ಮೇನ್ 14 ನೇ ಕ್ರಾಸ್‌ನಲ್ಲಿ 75 ನೇ ಸ್ವಾತಂತ್ರ್ಯ ದಿನಾಚರಣೆಯಂದು ಮಕ್ಕಳಿಗೆ, ಪುರುಷರಿಗೆ, ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಮಹಿಳೆಯರಿಗೆ ಚುಕ್ಕಿ ರಂಗೋಲಿ ಸ್ಪರ್ಧೆ ನಡೆಯಲಿದೆ. ನೃತ್ಯ, ಫ್ಯಾನ್ಸಿ ಡ್ರೆಸ್ ಮುಂತಾದ ಸಾಂಸ್ಕೃತಿಕ ಸ್ಪರ್ಧೆ ವ್ಯವಸ್ಥೆಗೊಳಿಸಲಾಗಿದೆ. ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಶ್ರೀ ಮಾತಾ ಪಾಲಿ ಕ್ಲಿನಿಕ್ ನಲ್ಲಿ ಇಂದಿನಿಂದ ಇದೇ ದಿನಾಂಕ 25 ರವರೆಗೆ ಉಚಿತ ಆರೋಗ್ಯ ತಪಾಸಣೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9632552918, 9611269566.

**ಕಲ್ಪನಹಳ್ಳಿ ಶ್ರೀಮತಿ ಕರಿಬಸಮ್ಮ ನಿಧನ**



ದಾವಣಗೆರೆ ತಾಲ್ಲೂಕು ಹೆಚ್. ಕಲ್ಪನಹಳ್ಳಿ ಗ್ರಾಮದ ವಾಸಿ ದಿ. ಈಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ಕರಿಬಸಮ್ಮ (85) ಇವರು, ದಿನಾಂಕ 14.8.2022ರ ಭಾನುವಾರ ರಾತ್ರಿ 8.10 ಗಂಟೆಗೆ ನಿಧನರಾದರು. ಐವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.8.2022ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಕಲ್ಪನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ಮಲೇಬೆನ್ನೂರಿನಲ್ಲಿ ಬಿಜೆಪಿ ಬೈಕ್ ರ್‍ಯಾಲಿ



ಮಲೇಬೆನ್ನೂರು, ಆ.14- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಹರಿಹರ ತಾ. ಗ್ರಾಮಾಂತರ ಬಿಜೆಪಿ ವತಿಯಿಂದ ಪಟ್ಟಣದಲ್ಲಿ ಭಾನುವಾರ ಬೈಕ್ ರ್‍ಯಾಲಿ ಮೂಲಕ ಹರ್ ಘರ್ ತಿರಂಗಾ ಅಭಿಯಾನದ ಜಾಗೃತಿ ಮೂಡಿಸಲಾಯಿತು.

ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪ್ರಧಾನ ಕಾರ್ಯದರ್ಶಿಗಳಾದ ಆದಾಪುರ ವೀರೇಶ್, ಹುಣ್ಣಿ ಮಹಾಂತೇಶ್, ಬಿಜೆಪಿ ರೈತ ಮೋರ್ಚಾ ಕಾರ್ಯದರ್ಶಿ ಕುಂಬಳೂರಿನ ನಿರಂಜನ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಬಿ. ಮಂಜುನಾಥ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಬಿ. ಸುರೇಶ್, ಓ.ಜಿ. ಕುಮಾರ್, ಜಿಗಳೇರ ಹಾಲೇಶಪ್ಪ, ಓ. ಜಿ. ಧನು, ದೊರೆ, ಬೆಣ್ಣೆಹಳ್ಳಿ ಬಸವರಾಜ್, ಐರಣಿ ಮಹೇಶ್ವರಪ್ಪ, ಹಳ್ಳಿಹಾಳ್ ಶಿವನಗೌಡ, ಜಿ. ಸುನೀಲ್ ಮತ್ತಿತರರು ಭಾಗವಹಿಸಿದ್ದರು.

## ರಾಣೇಬೆನ್ನೂರಿನಲ್ಲಿ ಅರಸು ಹುಟ್ಟುಹಬ್ಬ



ಗಂಗಾ ಸಹಕಾರಿ ಬ್ಯಾಂಕ್‌ನಲ್ಲಿ ಸ್ವಾತಂತ್ರ್ಯೋತ್ಸವ ದಿನದಂದು ಮಾಜಿ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸು ಅವರ 107ನೇ ಹಾಗೂ ಬ್ಯಾಂಕಿನ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಸುಣಗಾರ ಅವರ 75 ನೇ ಹುಟ್ಟುಹಬ್ಬ ಆಚರಣೆ ಹಾಗೂ ರಾಜ್ಯ ಸಹಕಾರಿ ಸೌಹಾರ್ದ ಒಕ್ಕೂಟದ ಸದಸ್ಯ ಕೆ. ಶಿವಲಿಂಗಪ್ಪ ಅವರಿಗೆ ಸನ್ಮಾನ, ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ.

ಕುಂದಾಪುರ ಸಭಾಭವನದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರತ್ನಾಕರ ಕುಂದಾಪುರ ವಹಿಸಲಿದ್ದಾರೆ.

## ಪುಣಭಗಟ್ಟ ಗ್ರಾಮದಲ್ಲಿ ಇಂದು ಪುಣ್ಯದ ಕಟ್ಟೆ ಪುಣ್ಯಾರಾಧನೆ

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಪುಣಭಗಟ್ಟ ಗ್ರಾಮದಲ್ಲಿ ಇಂದು ಪುಣ್ಯದ ಕಟ್ಟೆ ಪುಣ್ಯಾರಾಧನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಮುಂಜಾನೆ 4.30 ರಿಂದ ಪೂಜಾ ಕೈಂಕರ್ಯಗಳು ನೆರವೇರಲಿವೆ. 9 ಗಂಟೆಯ ನಂತರ ಪ್ರಸಾದ ವಿನಿಯೋಗ ನಡೆಯಲಿದೆ.


Eswar Digitronics
SINCE 1951
Happpy 75th
ANNIVERSARY &
FREEDOM SALE
70 YEARS OF TRUST
15 August Independence Day
FREE HOME DELIVERY
BAJAJ FINSERV
ZERO INTEREST
ZERO DOWNPAYMENT
CASH BACK UPTO 10,000/-
1 EMI FREE
SONY OLED 65" 6,500/- EMI PER MONTH
MODEL NO - XR65A80K
STARTS FROM - 2,56,490/-*
INSTANT CASH BACK UPTO 9,000/-
SAMSUNG 75" 6,990/- EMI PER MONTH
MODEL NO - 75BU8000
STARTS FROM - 1,89,990/-*
INSTANT CASH BACK UPTO 9,000/-
LG LED 55" 2,999/- EMI PER MONTH
STARTS FROM - 52,990/-*
INSTANT CASH BACK UPTO 12,000/-
SONY 75" 7,500/- EMI PER MONTH
MODEL NO - 75X80K
STARTS FROM - 2,29,900/-*
INSTANT CASH BACK UPTO 9,000/-
Haier 75" 7,500/- EMI PER MONTH
MODEL NO - 75K6600HQGA
STARTS FROM - 1,39,900/-*
INSTANT CASH BACK UPTO 6,000/-
SAMSUNG FAMILY HUB
700 LTR SIDE BY SIDE
INSTANT CASH BACK UPTO 12,000/-
STARTS FROM - 93,200/-*
BOSCH 658 LTR
INSTANT CASH BACK UPTO 10,000/-
STARTS FROM - 72,990/-*
LG 687 LTR
INSTANT CASH BACK UPTO 9,000/-
STARTS FROM - 86,500/-*
Haier 578 LTR
INSTANT CASH BACK UPTO 6,000/-
STARTS FROM - 59,900/-*
BOSCH 658 LTR
UPTO 10% INSTANT CASH BACK UPTO 2,000/-
MIXER FREE
STARTS FROM - 27,000/-*
SAMSUNG FRONT LOAD W/M 8 KG
INSTANT CASH BACK UPTO 9,000/-
STARTS FROM - 37,900/-*
BOSCH 9 KG
INSTANT CASH BACK UPTO 7,500/-
STARTS FROM - 46,900/-*
LG 8 KG
INSTANT CASH BACK UPTO 9,000/-
STARTS FROM - 38,500/-*
BOSCH 6.5 KG
INSTANT CASH BACK UPTO 3,000/-
STARTS FROM - 17,000/-*
Whirlpool 6.5 KG
INSTANT CASH BACK UPTO 2,000/-
STARTS FROM - 15,300/-*
BOSCH CHIMNY HOB
STARTS FROM - 35,000/-*
FABER CHIMNY HOB
MIXER FREE
STARTS FROM - 11,990/-*
SAMSUNG LG Godrej
STARTS FROM - 5,999/-*
morphy richards smart ideas for your home BAJAJ
STARTS FROM - 3,999/-*
LLOYD MITSUBISHI ELECTRIC Cooling and Heating Solutions DAIKIN
STARTS FROM - 23,999/-*
+ FREE INSTALLATION
PHILIPS
UPTO 15% OFF
APPLIANCES
PHILIPS BOSCH Preethi BAJAJ Panasonic ideas for life
UPTO 40% OFF
MIXER GRINDER
BAJAJ Prestige
UPTO 40% OFF
WET GRINDER
WATER PURIFIER
KENT EUREKA FORBES BLUE STAR
UPTO 25% OFF
COOKWARE
COOKER UPTO 25% OFF
TAVA
*T&C APPLY
SONY SAMSUNG BOSCH Haier LG Whirlpool Godrej IFB PHILIPS KENT EUREKA FORBES FABER
Eswar Digitronics
Since 1951
Eswar
SRI MARULASIDDESHWARA COMPLEX NH-13, NEAR BUS-STAND
CHANNAGIRI - +91 90086 63411
# 8 & 9, SRI MURUGARAJENDRA COMPLEX,
OPP. JAYADEVA PETROL BUNK, HADADI ROAD,
DAVANGERE - 08192 253411 | +91 90088 33411

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಆಗಸ್ಟ್ 15, 2022


## ರಾಯರ ಆರಾಧನೆ : ಸಂಭ್ರಮದ ರಥೋತ್ಸವ



ದಾವಣಗೆರೆ, ಆ. 14- ಕಲಿಯುಗದ ಕಾಮಧೇನು ಶ್ರೀ ರಾಘವೇಂದ್ರ ಸ್ವಾಮಿಗಳ 351ನೇ ಆರಾಧನಾ ಮಹೋತ್ಸವದ ಅಂಗವಾಗಿ ನಗರದಲ್ಲಿ ರಾಯರ ರಥೋತ್ಸವ ನೆರವೇರಿತು.

ಕೆ.ಬಿ. ಬಡಾವಣೆಯ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಕಳೆದ ಎರಡು ದಿನಗಳಿಂದ ಆರಾಧನಾ ಮಹೋತ್ಸವ ಕಾರ್ಯಕ್ರಮಗಳು ನಡೆದವು. ಭಾನುವಾರ ಉತ್ತರಾರಾಧನೆ ಅಂಗವಾಗಿ ವೇದ, ವಾದ್ಯ, ಭಜನೆ, ನಾದಸ್ವರದೊಂದಿಗೆ ರಾಜ ಬೀದಿಗಳಲ್ಲಿ ಗುರುರಾಯರ ರಥೋತ್ಸವ ಸಂಭ್ರಮದಿಂದ ನೆರವೇರಿತು.

## ಹಲೋ ಬದಲು 'ವಂದೇ ಮಾತರಂ' : ನೌಕರರಿಗೆ ಆದೇಶ

ಮುಂಬೈ, ಆ. 14 – ರಾಜ್ಯ ಸರ್ಕಾರಿ ನೌಕರರು ತಮ್ಮ ಕಚೇರಿಯ ಫೋನ್‌ಗಳಿಗೆ ಕರೆ ಬಂದಾಗ ಹಲೋ ಎನ್ನುವ ಬದಲು 'ವಂದೇ ಮಾತರಂ' ಎಂದು ಹೇಳುವಂತೆ ಮಹಾರಾಷ್ಟ್ರದ ನೂತನ ಸಂಸ್ಕೃತಿ ಸಚಿವ ಸುಧೀರ್ ಮುಂಗಂಟಿವಾರ್ ತಿಳಿಸಿದ್ದಾರೆ.

75ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಈ ಹೇಳಿಕೆ ನೀಡಿರುವ ಅವರು, ಅಧಿಕಾರಿಗಳೆಲ್ಲರೂ 'ವಂದೇ ಮಾತರಂ' ಹೇಳಬೇಕು ಎಂದು ತಿಳಿಸಿದ್ದಾರೆ.

ಈ ಬಗ್ಗೆ ಆಗಸ್ಟ್ 18ರಂದು ಅಧಿಕೃತ ಆದೇಶ ಹೊರಡಿಸಲಾಗುವುದು. ಮುಂದಿನ ವರ್ಷ ಜನವರಿ 26ರವರೆಗೆ ಈ ಆದೇಶ ಜಾರಿಯಲ್ಲಿರಲಿದೆ ಎಂದವರು ಹೇಳಿದ್ದಾರೆ.

# ದಾವಣಗೆರೆ ಜಿಲ್ಲೆ: ಬೆಳ್ಳಿ ಹೆಜ್ಜೆ-ಅಭಿವೃದ್ಧಿ ಆಮೆ ಹೆಜ್ಜೆ

ಬಾ.ಮ. ಬಸವರಾಜಯ್ಯ

ನಮ್ಮ ಜನಪದ ಕಲಾವಿದ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದಿವಂಗತ ಜಿ. ಮಹಾಂತೇಶ್ ಅವರು ತಮ್ಮ ಕಂಠಸಿರಿಯಿಂದ ಸಭೆ, ಸಮಾರಂಭಗಳಲ್ಲಿ ಈ ಒಂದು ಹಾಡನ್ನು ತಪ್ಪದೇ ಹಾಡುತ್ತಿದ್ದರು.

'ಜಯ ಕರ್ನಾಟಕ, ಜಯ ಕರ್ನಾಟಕ, ಜಯ ಕರ್ನಾಟಕ ಮಾತೇ...' ಈ ಹಾಡಿನಲ್ಲಿ ಒಂದು ಪ್ಯಾರ ಹೀಗಿತ್ತು. 'ಹತ್ತಕ್ಕೆ ಒಂಭತ್ತು ಸೇರಿ ಈ ನಾಡು ಜನಿಸಿತಂತೆ.....' ಎಂದು. ಮಹಾಂತೇಶ್ ಅವರು ಬಹು ವರ್ಷಗಳ ಕಾಲ ಕರ್ನಾಟಕದ ವರ್ಣನೆಯನ್ನು ಹತ್ತೊಂಭತ್ತು ಜಿಲ್ಲೆಗೆ ಸೀಮಿತಗೊಳಿಸಿ; ಆಯಾ ಜಿಲ್ಲೆಯ ವೈಭವದ ಒಂದೊಂದು ಪದ ಸೇರಿಸಿ ಹಾಡಿ ಕೊಂಡಾಡುತ್ತಿದ್ದರು.

ಈ ಮಧ್ಯೆ ಎಪ್ಪತ್ತರ ದಶಕದಿಂದಲೂ ಹೊಸ ಜಿಲ್ಲೆಗಳ ರಚನೆ ಆಗಬೇಕು, ಆಗಲೇಬೇಕು ಎಂಬ ಕೂಗು ಸಾರ್ವಜನಿಕ ವಲಯಗಳಿಂದ ಕೇಳಿ ಬರುತ್ತಿದ್ದವು. ಈ ಜನಧ್ವನಿಯನ್ನು ನಮ್ಮ ಪತ್ರಿಕಾ ಮಾಧ್ಯಮಗಳು ಪರಿಣಾಮಕಾರಿಯಾಗಿ ಧ್ವನಿಸುತ್ತಿದ್ದರೂ, ಆಡಳಿತ ನಡೆಸುವ ಸರ್ಕಾರಕ್ಕೆ ಕೇಳಿಸುತ್ತಿರಲಿಲ್ಲ. ಕೇಳಿಸಿದರೂ ಉದಾಸೀನತೆಯೇ ಸರ್ಕಾರಗಳ ಬೀಜ ಮಂತ್ರ ಆಗಿ ಹೋಗಿತ್ತು.

ಅದೇನೋ ಬೆಂಗಳೂರು ಜಿಲ್ಲೆಯನ್ನು ಆಡಳಿತಾತ್ಮಕ ದೃಷ್ಟಿಕೋನದ ಹಿನ್ನೆಲೆ ಇಟ್ಟುಕೊಂಡು ನಗರ ಜಿಲ್ಲೆ ಹಾಗೂ ಗ್ರಾಮಾಂತರ ಜಿಲ್ಲೆ ಎಂದು ಮಾಡಲಾಯಿತು... ಆಗ ನಮ್ಮ ಜಿ. ಮಹಾಂತೇಶ್ ಅವರು 'ಹತ್ತೊಂಬತ್ತಕೆ ಮತ್ತೊಂದು ಸೇರಿ...' ಪದ ಸೇರಿ ಕರ್ನಾಟಕದ ವರ್ಣನೆ ಹಾಡತೊಡಗಿದರು.

ಧಾರವಾಡ, ಬಿಜಾಪುರ, ಕಲ್ಬುರ್ಗಿ, ಬೆಳಗಾವಿ ಮುಂತಾದ ಹದಿನೈದಕ್ಕೂ ಹೆಚ್ಚು ತಾಲ್ಲೂಕು ಕೇಂದ್ರ ಇರುವ ಜಿಲ್ಲೆಗಳು ಆಡಳಿತಾತ್ಮಕ ದೃಷ್ಟಿಯಿಂದ ತೀರಾ ತೊಂದರೆ

**ಜಿಲ್ಲೆಯಾದ ಈ ಇಪ್ಪತ್ತೈದು ವರ್ಷಗಳಲ್ಲಿ ಸಮಾಧಾನ ಪಡುವ ಅಂಶವೆಂದರೆ ಜಿಲ್ಲೆಯ ನೂರಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸುವ ಯೋಜನೆ ಕೈಗೊಂಡಿದ್ದೂ ಅಲ್ಲದೇ ಕುಡಿಯುವ ನೀರಿನ ಹಾಹಾಕಾರ ಉಂಟಾಗದಿರುವುದು. ಈ ಕಾರ್ಯದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಒತ್ತಾಯ ಹಾಗೂ ಒತ್ತಾಸೆ ಇತ್ತು ಎಂಬುದನ್ನು ಮರೆಯುವಂತಿಲ್ಲ.**





ಅನುಭವಿಸುತ್ತಿದ್ದವು. ಅಲ್ಲಿನ ಜನರ ಹೊಸ ಜಿಲ್ಲೆ ಬೇಡಿಕೆಯನ್ನು ಮುಂದೂಡುತ್ತಲೇ ಬರಲಾಗುತ್ತಿತ್ತು. ಜನರ ಕೂಗು ಹೆಚ್ಚಾದಾಗ, 'ಹುಂಡೇಕರ್ ಸಮಿತಿ, ಗದ್ದಿಗೌಡರ್ ಸಮಿತಿ...' ಹೀಗೆ 'ಜಿಲ್ಲಾ ಪುನರ್ ವಿಂಗಡಣಾ ಸಮಿತಿ' ರಚಿಸಿ ಕಾಲ ತಳ್ಳುತ್ತಾ ಬರಲಾಯಿತು.

ದಾವಣಗೆರೆಯಲ್ಲಿ ಜನತಾ ಪರಿವಾರ 'ದಶ ದಿಕ್ಕುಗಳಿಂದ' ಸಮಾವೇಶ ನಡೆಸಿ 1994 ರಲ್ಲಿ ದೇವೇಗೌಡರ ನಾಯಕತ್ವದಲ್ಲಿ ಅಧಿಕಾರಕ್ಕೆ ಬಂದಿತು. ನಂತರದಲ್ಲಿ ದೇವೇಗೌಡರ ಅದೃಷ್ಟ ಖುಲಾಯಿಸಿ, ದೇಶದ ಪ್ರಧಾನಮಂತ್ರಿ ಆದರು. ಅವರ ನಂತರ ಜೆ.ಹೆಚ್. ಪಟೇಲರು ಮುಖ್ಯಮಂತ್ರಿ ಆದರು.

ಜೆ.ಹೆಚ್. ಪಟೇಲ್ ಅಂದರೆ ಅದಮ್ಯ ಇಚ್ಛಾಶಕ್ತಿಯ ವ್ಯಕ್ತಿತ್ವ. ಅವರು ಹೊಸ ಜಿಲ್ಲೆಯ ರಚನೆಗೆ ಕೈ ಹಾಕಿದರು. ಆಡಳಿತದಲ್ಲಿ ಇದ್ದ ಹತ್ತು ಹಲವಾರು ಮುಖಂಡರು 'ಹೊಸ ಜಿಲ್ಲೆ ಮಾಡಿದರೆ, ಅದಕ್ಕೆ ತಕ್ಕಂತೆ ಆಡಳಿತಕ್ಕೆ ಬೇಕಾಗುವ ಕಟ್ಟೆ-ಕಟ್ಟಡಗಳಿಗೆ, ಸಿಬ್ಬಂದಿ ನೇಮಕಕ್ಕೆ ದುಡ್ ಎಲ್ಲಿಂದ ತರ್ತೀರಿ...' ಎಂದೆಲ್ಲಾ ಗೊಣಗಾಡಿದ್ದೂ ಆಯ್ತು. ಜೆ.ಹೆಚ್. ಪಟೇಲ್ ಎಂಬ ಇಚ್ಛಾಶಕ್ತಿ ಮಾಡಿದ ನಿರ್ಧಾರ ಕೈಬಿಡಲಿಲ್ಲ. ಹೊಸ ಏಳು ಜಿಲ್ಲೆಗಳನ್ನು 1997 ರಲ್ಲಿ ಘೋಷಿಸಿದ್ದು, ಅಷ್ಟೇ ಅಲ್ಲ, ಆಗಸ್ಟ್-15 ರಂದು ಎಲ್ಲಾ ಜಿಲ್ಲೆಗಳನ್ನು ಉದ್ಘಾಟನೆ ಮಾಡಿ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡರು...! 'ಕರ್ನಾಟಕದ ಇತಿಹಾಸದಲ್ಲಿ ಇದೊಂದು ಚರಿತ್ರಾರ್ಹ ನಿರ್ಧಾರ' ಎಂದು ನಾಡಿನ ಮಾಧ್ಯಮಗಳು ಹೊಗಳಿ ಸಂಪಾದಕೀಯ ಬರೆದವು.

ದಿವಂಗತ ಜೆ.ಹೆಚ್. ಪಟೇಲ್‌ರು 1997 **(7ನೇ ಪುಟಕ್ಕೆ)**

# ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆಗೆ ಒತ್ತಾಯ

ಹರಪನಹಳ್ಳಿ, ಆ. 14- ರಾಜ್ಯದಲ್ಲಿಯೇ ಅತ್ಯಂತ ಶೋಚನಿಯ ಸ್ಥಿತಿಯನ್ನು ಅನುಭವಿಸುತ್ತಿರುವ ಮಡಿವಾಳ ಸಮಾಜ ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದಿದ್ದು, ರಾಜ್ಯ ಸರ್ಕಾರ ಕೂಡಲೇ ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸಬೇಕು ಎಂದು ಪುರಸಭೆ ಅಧ್ಯಕ್ಷ ಎಚ್.ಎಂ. ಅಶೋಕ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಡಿವಾಳ ಸಮಾಜದ ನಗರ ಘಟಕದ ಪದಾಧಿಕಾರಿಗಳು, ಮಹಿಳೆಯರು ಹಾಗೂ ಮುಖಂಡರು ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ದೇಶದಲ್ಲಿಯೇ ಬಟ್ಟೆಯ ಕೊಳೆಯನ್ನು ತೆಗೆಯುವ ಸಮಾಜ ಇದಾಗಿದ್ದು, ದೇಶ ಹಾಗೂ ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಕ್ಷಯ, ಕ್ಯಾನ್ಸರ್ ಸೇರಿದಂತೆ ಅನೇಕ ರೋಗಿಗಳ ಮಲ, ಮೂತ್ರ, ಬಟ್ಟೆಗಳನ್ನು ಶುಚಿಯಾಗಿಡುವ ಕೆಲಸ ಸಮಾಜದವರಿಂದ ನಡೆಯುತ್ತಿದೆಯಾದರೂ ಅವರನ್ನು ಅನೇಕ ಕಡೆಗಳಲ್ಲಿ ಇಂದಿಗೂ ಖಾಯಂ ನೌಕರರು ಎಂದು ಪರಿಗಣಿಸದಿರುವುದು ವಿಷಾದದ ಸಂಗತಿ ಎಂದು ಹೇಳಿದರು.

ದೇಶದಲ್ಲಿ 18 ರಾಜ್ಯಗಳಲ್ಲಿ ಮಡಿವಾಳ ಸಮಾಜವು ಪರಿಶಿಷ್ಟ ಜಾತಿ ಪಟ್ಟಿಯಲ್ಲಿವೆ, 4 ರಾಜ್ಯಗಳಲ್ಲಿ ಇತರೆ ವರ್ಗಗಳ ಪಟ್ಟಿಯಲ್ಲಿದ್ದು ಅನೇಕ ವರ್ಷಗಳಿಂದ ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸುವಂತೆ ಆಗ್ರಹಿಸಿ ಹೋರಾಟಗಳನ್ನು ಮಾಡಿದರೂ ಯಾವುದೇ ಪಕ್ಷಗಳು ಗಮನ ಹರಿಸಿಲ್ಲ, ಕೂಡಲೇ ರಾಜ್ಯ ಸರ್ಕಾರ ನಮ್ಮ ಸಮುದಾಯಕ್ಕೆ ಎಸ್‌ಸಿ ಮೀಸಲಾತಿ ಕಲ್ಪಿಸಿ, ಮೂಲಸೌಕರ್ಯಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಮಡಿವಾಳ ಸಮಾಜದ ಮುಖಂಡರು, ಮಹಿಳೆಯರು ತಾಲ್ಲೂಕಿನಲ್ಲಿ ಸಮುದಾಯ ಭವನ, ಸುಸಜ್ಜಿತವಾದ ದೋಬಿಘಾಟ್, ಮನೆಗಳು ಸೇರಿದಂತೆ ಇತರೆ ಮೂಲಸೌಕರ್ಯ ಕಲ್ಪಿಸಿಕೊಡುವಂತೆ ಪುರಸಭೆ ಅಧ್ಯಕ್ಷರಿಗೆ ಬೇಡಿಕೆ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಅವರು **(7ನೇ ಪುಟಕ್ಕೆ)**

## ಅಮೃತ ಮಹೋತ್ಸವ: ರೋಲರ್ ಸ್ಕೇಟಿಂಗ್ ರ‍್ಯಾಲಿ




ದಾವಣಗೆರೆ, ಆ.14- ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಮತ್ತು ರೋಟರಿ ಸಂಸ್ಥೆ ದಾವಣಗೆರೆ ದಕ್ಷಿಣ ಸಹಯೋಗದೊಂದಿಗೆ ಭಾನುವಾರ ನಗರದ ಡಾ.ಎಂ.ಸಿ. ಮೋದಿ ವೃತ್ತದಿಂದ ಜಯದೇವ ವೃತ್ತದವರೆಗೆ 75 ಸ್ಕೇಟರ್ಸ್‌ಗಳಿಂದ ರೋಲರ್ ಸ್ಕೇಟಿಂಗ್ ರ‍್ಯಾಲಿ ನಡೆಯಿತು. ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ರ‍್ಯಾಲಿಗೆ ಚಾಲನೆ ನೀಡಿದರು. ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ ಮಂಜುನಾಥ್, ರೋಟರಿ ಸಂಸ್ಥೆ ದಾವಣಗೆರೆ ದಕ್ಷಿಣದ ಅಧ್ಯಕ್ಷ ಸಿ.ಕೆ. ರಂಗಪ್ಪ ಇತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ನ್ಯೂ ದಾವಣಗೆರೆ ಡಿಸ್ಟ್ರಿಕ್ಟ್ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ವತಿಯಿಂದ ಸ್ಕೇಟರ್ಸ್‌ಗಳಿಗೆ ಉಚಿತವಾಗಿ ಟಿ-ಶರ್ಟ್ ವಿತರಿಸಲಾಯಿತು.

## ರಾಷ್ಟ್ರ ನಿರ್ಮಾಣಕ್ಕೆ ಮುಡಿಪಾಗಲು ಕರೆ

### ಕುವೆಂಪು ಕವಿತೆ ಸಾಲು ಉಲ್ಲೇಖಿಸಿದ ರಾಷ್ಟ್ರಪತಿ ಮುರ್ಮು



ನವದೆಹಲಿ, ಆ. 14 – ಸ್ವಾತಂತ್ರ್ಯೋತ್ಸವದ ಮುನ್ನಾ ದಿನ ದೇಶವನ್ನು ಉದ್ದೇಶಿಸಿ ಮಾತನಾಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಕವಿ ಕುವೆಂಪು ಅವರ ಕವಿತೆಯ ಸಾಲುಗಳನ್ನು ಉಲ್ಲೇಖಿಸಿದ್ದು, ರಾಷ್ಟ್ರ ನಿರ್ಮಾಣಕ್ಕೆ ಮುಡಿಪಾಗುವಂತೆ ಕರೆ ನೀಡಿದ್ದಾರೆ.

ದೇಶವನ್ನುದ್ದೇಶಿಸಿ ಮಾಡಿದ ತಮ್ಮ ಮೊದಲ ಭಾಷಣದಲ್ಲಿ ಮುರ್ಮು ಅವರು ಕವೆಂಪು ಅವರ 'ನವ ಭಾರತ ಲೀಲೆ' ಕವನದ ಸಾಲುಗಳನ್ನು ಕನ್ನಡದಲ್ಲೇ ಹೇಳಿದ್ದಾರೆ. 'ನಾನಳಿವೆ ನೀನಳಿವೆ ನಮ್ಮೆಲುವುಗಳ ಮೇಲೆ ಮೂಡುವುದು ಮೂಡುವುದು ನವ ಭಾರತದ ಲೀಲೆ' ಎಂಬ ಸಾಲನ್ನು ಮುರ್ಮು ಉಲ್ಲೇಖಿಸಿದ್ದಾರೆ.

ಕುವೆಂಪು ಅವರನ್ನು ಕನ್ನಡ ಭಾಷೆಯನ್ನು ಸಮೃದ್ಧಗೊಳಿಸಿರುವ ಮಹಾನ್ ರಾಷ್ಟ್ರವಾದಿ ಕವಿ ಎಂದು ಬಣ್ಣಿಸಿರುವ ಮುರ್ಮು, ಕುವೆಂಪು ಅವರು ತಮ್ಮ ಕವಿತೆಯ ಈ ಸಾಲಿನಲ್ಲಿ, ನಾನು ಇರುವುದಿಲ್ಲ, ನೀವು ಇರುವುದಿಲ್ಲ. ನಮ್ಮ ಅಸ್ಥಿಗಳ ಮೇಲೆ ಉದಯವಾಗಲಿದೆ ನವ ಭಾರತದ **(7ನೇ ಪುಟಕ್ಕೆ)**


## ಸ್ವಾತಂತ್ರ್ಯ ದಿನಾಚರಣೆ ಜಾಹೀರಾತಿನಲ್ಲಿ ನೆಹರು ಬಿಟ್ಟ ಸರ್ಕಾರ: ಕಾಂಗ್ರೆಸ್ ನಾಯಕರ ತರಾಟೆ

ಬೆಂಗಳೂರು/ನವದೆಹಲಿ, ಆ. 14 – ಕರ್ನಾಟಕದ ಬಿಜೆಪಿ ಸರ್ಕಾರ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಪ್ರಕಟಿಸಿದ ಜಾಹೀರಾತಿನಲ್ಲಿ ದೇಶದ ಪ್ರಥಮ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರನ್ನು ಕೈ ಬಿಡಲಾಗಿದೆ ಎಂದು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆರ್.ಎಸ್.ಎಸ್. ಗುಲಾಮ ಎಂದಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಮಾತನಾಡಿ, ದೇಶದ ಪ್ರಥಮ ಪ್ರಧಾನಿ ಕುರಿತು ಬಿಜೆಪಿ ಹೊಂದಿರುವ ದ್ವೇಷ ಉತ್ತುಂಗಕ್ಕೇರಿದೆ ಎಂದಿದ್ದಾರೆ.

ನೆಹರು ಇಂತಹ ಸಣ್ಣತನಗಳನ್ನು ಮೀರಿ ಉಳಿಯಲಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಅವರ ತಂದೆ ಎಸ್.ಆರ್. ಬೊಮ್ಮಾಯಿ ಹಾಗೂ ಅವರ ತಂದೆಯ ಮೊದಲ ರಾಜಕೀಯ ಗುರು ಎಂ.ಎನ್. ರಾಯ್ ಅವರಿಬ್ಬರೂ ನೆಹರು ಪ್ರಶಂಸಕರಾಗಿದ್ದರು. ಆದರೆ, ಬೊಮ್ಮಾಯಿ ಅವರು ತಮ್ಮ **(7ನೇ ಪುಟಕ್ಕೆ)**

## ಕನ್ನಿಕಾ ಪರಮೇಶ್ವರಿ ಬ್ಯಾಂಕಿಗೆ 3.50 ಕೋಟಿ ನಿವ್ವಳ ಲಾಭ



ದಾವಣಗೆರೆ, ಆ.14- ಹಣಕಾಸು ವರ್ಷ 2021-22ನೇ ಸಾಲಿನಲ್ಲಿ 1 ಕೋಟಿ 3 ಲಕ್ಷ ರೂ.ಗಳ ಷೇರು ಬಂಡವಾಳ, 18 ಕೋಟಿ 57 ಲಕ್ಷಗಳ ಸ್ವಂತ ಬಂಡವಾಳ, 109 ಕೋಟಿ 75 ಲಕ್ಷಗಳ ಠೇವಣಿ, ಸಾಲ ಮುಂಗಡಗಳು, 87 ಕೋಟಿ 91 ಲಕ್ಷಗಳಿಂದ ದುಡಿಯುವ ಬಂಡವಾಳ, 133 ಕೋಟಿ 30 ಲಕ್ಷಗಳಿಂದ ವಾರ್ಷಿಕ ಅಂತ್ಯಕ್ಕೆ ರೂ.5 ಕೋಟಿ 10 ಲಕ್ಷಗಳ ವ್ಯವಹಾರ ಲಾಭವನ್ನು ಗಳಿಸಿ ಸರ್ಕಾರದ ನಿಯಮಾನುಸಾರ ಪ್ರವದಾನಗಳನ್ನು ಮತ್ತು ಆದಾಯ ತೆರಿಗೆಗಳನ್ನು ಸಂದಾಯ ಮಾಡಿದ ನಂತರ ನಿವ್ವಳ ಲಾಭ 3 ಕೋಟಿ 50 ಲಕ್ಷದ 28 ಸಾವಿರ ರೂ. **(7ನೇ ಪುಟಕ್ಕೆ)**

## ವಿನಾಯಿತಿ ರಹಿತ ತೆರಿಗೆ ಪದ್ಧತಿಗೆ ಪರಿಶೀಲನೆ

ನವದೆಹಲಿ, ಆ. 14 - ವೈಯಕ್ತಿಕ ಆದಾಯ ತೆರಿಗೆ ಪಾವತಿದಾರರಿಗೆ ಹೆಚ್ಚು ಆಕರ್ಷಕವಾಗುವ ರೀತಿಯ ವಿನಾಯಿತಿ ಮುಕ್ತ ಹೊಸ ತೆರಿಗೆ ಪದ್ಧತಿಯನ್ನು ಪರಿಶೀಲಿಸುವುದಾಗಿ ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಯಾವುದೇ ವಿನಾಯಿತಿ ಇರದ ಹೊಸ ವ್ಯವಸ್ಥೆಯನ್ನು ರೂಪಿಸಲು ಸರ್ಕಾರ ಉದ್ದೇಶಿಸಿದೆ.

ಹಲವಾರು ವಿನಿಯಿತಿಗಳು ಹಾಗೂ ಕಡಿತಗಳೊಂದಿಗೆ ಸಂಕೀರ್ಣವಾದ ಹಳೆಯ ಪದ್ಧತಿಯನ್ನು ಕೈ ಬಿಡಲಾಗುವುದು ಎಂದು ಮೂಲಗಳು ಹೇಳಿವೆ.

2020-21ರ ಬಜೆಟ್‌ನಲ್ಲಿ ಹೊಸ ತೆರಿಗೆ ಪದ್ಧತಿಯನ್ನು ಪರಿಚಯಿಸಲಾಗಿತ್ತು. ತೆರಿಗೆದಾರರು ವಿನಾಯಿತಿ ಉಳ್ಳ ಹಳೆಯ ಪದ್ಧತಿ ಇಲ್ಲವೇ ವಿನಾಯಿತಿ ರಹಿತವಾದ ಕಡಿಮೆ ತೆರಿಗೆ ದರಗಳ ಹೊಸ ಪದ್ಧತಿಗಳಲ್ಲಿ ಯಾವುದನ್ನು ಬೇಕಾದರೂ ಆಯ್ಕೆ ಮಾಡುವ ಅವಕಾಶ ನೀಡಲಾಗಿತ್ತು.

ತೆರಿಗೆದಾರರಿಗೆ ಸರಳ ಪದ್ಧತಿ ನೀಡುವುದು ಹಾಗೂ ಆದಾಯ ತೆರಿಗೆ ಕಾಯ್ದೆ ಸರಳಗೊಳಿಸುವುದು ಹೊಸ ಪದ್ಧತಿಯ ಉದ್ದೇಶವಾಗಿತ್ತು. ಗೃಹ ಹಾಗೂ ಶಿಕ್ಷಣ ಸಾಲ ಮುಗಿಸಿಕೊಂಡಿರುವ ಜನರು ಹೊಸ ವಿನಾಯಿತಿ ರಹಿತ ಪದ್ಧತಿಗೆ ತೆರಳಲು ಬಯಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಡಿಮೆ ತೆರಿಗೆ ದರಗಳ ಕಾರಣದಿಂದಾಗಿ ಹೊಸ ಪದ್ಧತಿಯು ಹೆಚ್ಚು ಆಕರ್ಷಕವಾಗಿದೆ.

ಇದೇ ರೀತಿಯ ಪದ್ಧತಿಯನ್ನು ಕಾರ್ಪೊರೇಟ್ ತೆರಿಗೆಗಳಿಗೆ 2019ರಲ್ಲಿ ಜಾರಿಗೆ ತರಲಾಗಿತ್ತು. ಆ ಮೂಲಕ ತೆರಿಗೆ ದರ ಕಡಿಮೆ ಮಾಡಿ, ವಿನಾಯಿತಿಗಳನ್ನು ರದ್ದುಗೊಳಿಸಲಾಗಿತ್ತು.

## ಜಿಲ್ಲಾ ಬಿಜೆಪಿ ಮೌನ ಮೆರವಣಿಗೆ



**'ಕರಾಳ ವಿಭಜನೆ ಸ್ಮರಣೆ ದಿನ'**

ದಾವಣಗೆರೆ, ಆ.14- ಜಿಲ್ಲಾ ಬಿಜೆಪಿಯಿಂದ ನಗರದಲ್ಲಿಂದು ಸಂಜೆ ದೇಶ ವಿಭಜನೆಯ ಕರಾಳ ದಿನದ ಅಂಗವಾಗಿ ಮೌನ ಮೆರವಣಿಗೆ ನಡೆಸಲಾಯಿತು.

ಜಿಲ್ಲಾ ಬಿಜೆಪಿ ಕಚೇರಿಯಿಂದ ಆರಂಭವಾದ ಮೆರವಣಿಗೆ ಗಾಂಧಿ ವೃತ್ತ, ಪಾಲಿಕೆ ಅಂಡರ್ ಪಾಸ್ ರಸ್ತೆ, ವಸಂತ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿತು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಶಾಸಕರಾದ ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ರಾಜ್ಯ ಪ್ರಕೋಷ್ಠಗಳ ಸಹ-ಸಂಚಾಲಕ ಡಾ.ಎ.ಎಚ್. ಶಿವಯೋಗಿಸ್ವಾಮಿ, ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ಮಾಜಿ ಶಾಸಕ ಬಸವರಾಜ ನಾಯ್ಕ, ಮೇಯರ್ ಜಯಮ್ಮ ಗೋಪಿನಾಯ್ಕ್, ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿರಾವ್, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಜಿಲ್ಲಾ **(7ನೇ ಪುಟಕ್ಕೆ)**

## ವಿಭಜನೆಯ ಕರಾಳ ದಿನಾಚರಣೆಗೆ ಆಕ್ಷೇಪ

ನವದೆಹಲಿ, ಆ. 14 – ರಾಷ್ಟ್ರ ವಿಭಜನೆಯ ಕರಾಳ ನೆನಪಿನ ದಿನ ಆಚರಿಸುತ್ತಿರುವುದಕ್ಕೆ ಆಕ್ಷೇಪಿಸಿರುವ ಕಾಂಗ್ರೆಸ್, ಆಘಾತಕಾರಿ ಘಟನೆಗಳನ್ನು ರಾಜಕೀಯ ಸಮರಕ್ಕೆ ದಾಳವಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಟೀಕಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ವಿಭಜನೆಯ ದುರಂತ ಘಟನೆಗಳನ್ನು ದ್ವೇಷ ಹಾಗೂ ಪಕ್ಷಪಾತದ ಬೆಂಕಿಗೆ ತುಪ್ಪ ಸುರಿಯಲು ಬಳಸಿಕೊಳ್ಳಬಾರದು ಎಂದಿದ್ದಾರೆ.

ದ್ವೇಷದ ರಾಜಕೀಯ ಸೋಲಿಸಲಾಗುವುದು. ದೇಶವನ್ನು ಒಗ್ಗಟ್ಟಾಗಿರಿಸುವ ಹಾಗೂ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಹೆಗ್ಗಳಿಕೆಯನ್ನು ಎತ್ತಿ ಹಿಡಿಯುವ ಕಾರ್ಯವನ್ನು ಕಾಂಗ್ರೆಸ್ ಮುಂದುವರಿಸಲಿದೆ ಎಂದವರು ಹೇಳಿದ್ದಾರೆ.

ಆಗಸ್ಟ್ 14ಅನ್ನು ರಾಷ್ಟ್ರ ವಿಭಜನೆಯ ಕರಾಳ ನೆನಪುಗಳ ದಿನವಾಗಿ ಆಚರಿಸಲಾಗುವುದು. ಈ ಸಂದರ್ಭದಲ್ಲಿ ಜನರ ಸಂಕಷ್ಟ ಹಾಗೂ ಬಲಿದಾನಗಳನ್ನು ಸ್ಮರಿಸಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದರು.

ಸಾವರ್ಕರ್ ಅವರು **(7ನೇ ಪುಟಕ್ಕೆ)**

## ಕಾಂಗ್ರೆಸ್‌ನಿಂದ ಸ್ವಾತಂತ್ರ್ಯೋತ್ಸವದ ಪಾದಯಾತ್ರೆ



ದಾವಣಗೆರೆ, ಆ. 14 – 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಮಹನೀಯರ ಸ್ಮರಣಾರ್ಥ ಜಿಲ್ಲಾ ಕಾಂಗ್ರೆಸ್ ವತಿಯಿಂದ ಭಾನುವಾರ ಸಂಜೆ ನಗರದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು.

ಜಯದೇವ ವೃತ್ತದಲ್ಲಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಪಾದಯಾತ್ರೆಯು ಶಿವಪ್ಪ ಸರ್ಕಲ್, ಲೆನಿನ್ ಸರ್ಕಲ್, ಇ.ಎಸ್.ಐ. ಆಸ್ಪತ್ರೆ, ಮಣಿಕಂಠ ಸರ್ಕಲ್, ದುರ್ಗಾಂಬಿಕಾ ದೇವಸ್ಥಾನ ಮೂಲಕವಾಗಿ ಕೊಂಡಜ್ಜಿ ಬಸಪ್ಪ ವೃತ್ತಕ್ಕೆ ತಲುಪಿ ಕೊನೆಗೊಂಡಿತು.


ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಕೋಟ್ಯಾಂತರ ಕಾಂಗ್ರೆಸ್ಸಿಗರು ತ್ಯಾಗ, ಬಲಿದಾನ ಮಾಡಿದ್ದಾರೆ. ಆ ಮೂಲಕ ಬಂದಿರುವ ಸ್ವಾತಂತ್ರ್ಯವನ್ನು ನಾವಿಂದು ಅನುಭವಿಸುತ್ತಿದ್ದೇವೆ ಎಂದರು.

ಪರಕೀಯರ ಕಪಿಮುಷ್ಟಿಯಲ್ಲಿದ್ದ ಭಾರ ತಾಂಬೆಯನ್ನು ಸ್ವತಂತ್ರವಾಗಿಸುವ ಐತಿಹಾಸಿಕ ಹೋರಾಟದಲ್ಲಿ ಮಹಾತ್ಮಗಾಂಧೀಜಿ, ಜವಾಹರ್ ಲಾಲ್ ನೆಹರು, ವಲ್ಲಭಬಾಯಿ ಪಟೇಲ್ ಅಂತಹ ಮಹನೀಯರು ನೀಡಿದ ಕೊಡುಗೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.

ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಸದಸ್ಯ ಎ. ನಾಗರಾಜ ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕಾಂಗ್ರೆಸ್ಸಿನ ಮಹನೀಯರ ಹೆಸರುಗಳು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದಾಗಿದೆ ಎಂದು ಹೇಳಿದರು.

ಪಾದಯಾತ್ರೆಯಲ್ಲಿ ಕಾಂಗ್ರೆಸ್ ಮುಖಂಡರಾದ ಕೆ.ಜಿ. ಶಿವಕುಮಾರ್, ಕೆ.ಎಸ್. ಬಸವಂತಪ್ಪ, ಎಸ್. ಮಲ್ಲಿಕಾರ್ಜುನ್, ಶಿರಮನಹಳ್ಳಿ ರುದ್ರೇಶ್, ರಾಜಶೇಖರ್, ಲಿಂಗರಾಜ್, ಬಿ.ಜಿ. ನಾಗರಾಜ್, ಎಸ್.ಕೆ. ಚಂದ್ರಶೇಖರ್, ಸೀಮೆಎಣ್ಣೆ ಮಲ್ಲೇಶ್, ಸುಷ್ಮಾ ಪಾಟೀಲ್, ಮಾಗಾನಹಳ್ಳಿ ಪರಶುರಾಮ್, ಗೀತಾ ಚಂದ್ರಶೇಖರ್, ಸ್ಮಿತ, ಮಂಜುಳಮ್ಮ, ದ್ರಾಕ್ಷಾಯಣಮ್ಮ, ರಾಜೇಶ್ವರಿ ಮತ್ತಿತರರು ಪಾಲ್ಗೊಂಡಿದ್ದರು.

# 12ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಅಥಣಿ ಎಸ್. ಕೊಟ್ರಪ್ಪ

ಜನನ: 4–3–1948 ನಿಧನ: 15–8–2010

ಕ್ಷಮೆಯೇ ಅಭಿಷೇಕ
ವಿವೇಕವೇ ವಸ್ತ್ರ
ಸತ್ಯವಚನವೇ ಆಭರಣ
ವೈರಾಗ್ಯವೇ ಪುಷ್ಪ
ಚಿತ್ತದ ಏಕಾಗ್ರತೆಯೇ ಗಂಧ
ನಿರಹಂಕಾರವೇ ಅಕ್ಷತೆಗಳು
ಶ್ರದ್ಧೆಯೇ ಧೂಪ
ಜ್ಞಾನವೇ ದೀಪ
ಅಹಂಕಾರ ನಿವೇದನೆಯೇ ನೈವೇದ್ಯ
ಮೌನವೇ ಗಂಟೆ
ವಿಷಯ ಸುಖ ನಿರಾಕರಣೆಯೇ ತಾಂಬೂಲ
ತ್ಯಾಗವೇ ಪ್ರದಕ್ಷಿಣೆ
ದೈವೀ ಶ್ರದ್ಧೆಯೇ ನಮಸ್ಕಾರ

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷ ಕಳೆಯಿತು. ಸದಾ ನಿಮ್ಮ ನೆನಪಿನಲ್ಲಿ

**ಚಿರಶಾಂತಿ ಕೋರುವವರು:**

- ಶ್ರೀಮತಿ ಶಾಂತಕುಮಾರಿ ಅಥಣಿ ಕೊಟ್ರಪ್ಪ
- ಶ್ರೀಮತಿ ಚಿನ್ನಮ್ಮ ಬಿ.ಕೆ. ರಾಜಶೇಖರಪ್ಪ
- ಶ್ರೀಮತಿ ಶೀಲಾ, ಶ್ರೀ ಅಥಣಿ ಎಸ್. ವೀರಣ್ಣ
- ಶ್ರೀಮತಿ ಮಂಗಳ, ಶ್ರೀ ಚನ್ನಬಸಪ್ಪ ಅಥಣಿ
- ಶ್ರೀಮತಿ ಪದ್ಮಾ, ಶ್ರೀ ಆರ್. ಮಂಜುನಾಥ್
- ಶ್ರೀಮತಿ ಶೀತಲ್, ಶ್ರೀ ಪ್ರಶಾಂತ್ ಅಥಣಿ
- ಶ್ರೀಮತಿ ನೀತಾ, ಶ್ರೀ ಅರುಣ್ ಕುಮ್ಮಟಹಳ್ಳಿ
- ಶ್ರೀಮತಿ ವೈಶಾಲಿ, ಶ್ರೀ ದಿನೇಶ್
- ಶ್ರೀಮತಿ ಡಾ|| ಸೀಮಾ, ಡಾ|| ನವೀನ್ ಪಾಟೀಲ್
- ಶ್ರೀಮತಿ ಶಿಲ್ಪಾ, ಶ್ರೀ ಅಶ್ವಿನ್‌ಶೆಟ್ಟರ್
- ಶ್ರೀಮತಿ ಸ್ಫೂರ್ತಿ, ಶ್ರೀ ದೀಪಕ್ ಅಥಣಿ
- ಶ್ರೀಮತಿ ಸುಷ್ಮಾ, ಶ್ರೀ ಚೇತಕ್ ಅಥಣಿ
- ಶ್ರೀಮತಿ ಪೂಜಾ, ಶ್ರೀ ಪ್ರಸಾದ್ ಅಥಣಿ
- ಶ್ರೀಮತಿ ಮೈತ್ರಾ, ಶ್ರೀ ಎ.ಕೆ. ಚನ್ನಪ್ಪ
- ಶ್ರೀಮತಿ ಶಿಲ್ಪ, ಶ್ರೀ ಮುಂಡಾಸದ ವೀರೇಂದ್ರ
- ಶ್ರೀಮತಿ ಸೋನಿ, ಶ್ರೀ ಸಾವನ್ ಅಂಬರ್‌ಕರ್

- ಶ್ರೀ ಆಂಜನೇಯ ಕಾಟನ್‌ಮಿಲ್ ಲಿ., ಸಿಬ್ಬಂದಿ ವರ್ಗ ಮತ್ತು ಕಾರ್ಮಿಕರು, ದಾವಣಗೆರೆ.
- ಅಥಣಿ ಬ್ರದರ್ಸ್ ಇಂಡಸ್ಟ್ರೀಸ್, ಸಿಬ್ಬಂದಿ ವರ್ಗ ಮತ್ತು ಕಾರ್ಮಿಕರು, ದಾವಣಗೆರೆ.
- ಶಾಂತಪ್ಪ ಅಂಡ್ ಕೋ., ದಾವಣಗೆರೆ.
- ಶಾಂತಪ್ಪ ಅಂಬರ್‌ಕರ್ ಮತ್ತು ವೀರಣ್ಣ, ಚಾರ್ಟೆಡ್ ಅಕೌಟೆಂಟ್ಸ್
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀ ಬಕ್ಕೇಶ್ವರ ಸೇವಾ ಸಮಿತಿ, ಚೌಕಿಪೇಟೆ, ದಾವಣಗೆರೆ.
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀಮದ್ ಅಭಿನವ ರೇಣುಕಾ ಮಂದಿರ, ದಾವಣಗೆರೆ.
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀ ಬಸವೇಶ್ವರ ಸೇವಾ ಸಮಿತಿ, ದೊಡ್ಡಪೇಟೆ, ದಾವಣಗೆರೆ.
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀ ದಾನಮ್ಮದೇವಿ ಸೇವಾ ಸಮಿತಿ, ದೊಡ್ಡಪೇಟೆ, ದಾವಣಗೆರೆ.
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀ ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್, ದಾವಣಗೆರೆ.
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀ ಲಿಂಗೇಶ್ವರ ಪಬ್ಲಿಕ್ ಟ್ರಸ್ಟ್, ದಾವಣಗೆರೆ.
- ಅಧ್ಯಕ್ಷರು ಮತ್ತು ಸದಸ್ಯರು, ಶ್ರೀ ವಿನಾಯಕ ಎಜ್ಯುಕೇಶನ್ ಟ್ರಸ್ಟ್ ಮತ್ತು ಇತರೆ ಅಂಗ ಸಂಸ್ಥೆಗಳು, ದಾವಣಗೆರೆ.

# ನಿಟ್ಟೂರು ಗ್ರಾಮದ ಇಟಗಿ ಬಸಮ್ಮ ನಿಧನ



ಹರಿಹರ ತಾಲ್ಲೂಕು ನಿಟ್ಟೂರು ಗ್ರಾಮದ ಹಿರಿಯರೂ, ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜದ ಮಾಜಿ ಉಪಾಧ್ಯಕ್ಷರೂ ಆದ ದಿ. ಇಟಗಿ ಮಹೇಶ್ವರಪ್ಪ ಅವರ ಧರ್ಮಪತ್ನಿ

## ಶ್ರೀಮತಿ ಬಸಮ್ಮ

ಅವರು ದಿನಾಂಕ 14.8.2022ರ ಭಾನುವಾರ ರಾತ್ರಿ 7.30ಕ್ಕೆ ನಿಧನರಾದರು. ಮೃತರಿಗೆ 81 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.08.2022ರ ಸೋಮವಾರ ಮಧ್ಯಾಹ್ನ 1.30 ಕ್ಕೆ ನಿಟ್ಟೂರು ಗ್ರಾಮದಲ್ಲಿ ನೆರವೇರಲಿದೆ.

**ದುಃಖತಪ್ತರು :**

ಪುತ್ರರಾದ : ಶ್ರೀಮತಿ ಪಾರ್ವತಮ್ಮ, ಶ್ರೀ ಇ.ಎಂ. ಮರುಳಸಿದ್ದಪ್ಪ,
ಶ್ರೀಮತಿ ಮಮತ, ಶ್ರೀ ಇ.ಎಂ. ರೇವಣಸಿದ್ದಪ್ಪ ಸಿವಿಲ್ ಇಂಜಿನಿಯರ್, ದಾವಣಗೆರೆ.
ಶ್ರೀಮತಿ ಶಕುಂತಲ, ಶ್ರೀ ಇಟಗಿ ಶಿವಣ್ಣ ಕಾರ್ಯದರ್ಶಿ, ಹರಿಹರ ತಾಲ್ಲೂಕು ಸಾಧು ವೀರಶೈವ ಸಮಾಜ,
ಡಾ|| ಪೂರ್ಣಿಮಾ, ಡಾ|| ಇ.ಎಂ. ಸುರೇಂದ್ರ, ಎಂ.ಡಿ., ಸುರಕ್ಷಾ ಹೆಲ್ತ್ ಕೇರ್, ದಾವಣಗೆರೆ.

ಪುತ್ರಿಯರಾದ :
ಶ್ರೀಮತಿ ಶಾರದಮ್ಮ, ಶ್ರೀ ನಿಟುವಳ್ಳಿ ರೇವಣಸಿದ್ದಪ್ಪ, ಬೆಳ್ಳೂಡಿ.
ಶ್ರೀಮತಿ ವಿನೋದ, ಶ್ರೀ ಭರಮಪ್ಪ, ಕಾಡಜ್ಜಿ
ಮತ್ತು ಮೊಮ್ಮಕ್ಕಳು,
ಇಟಗಿ ವಂಶಸ್ಥರು ಮತ್ತು ಗ್ರಾಮಸ್ಥರು,
ನಿಟ್ಟೂರು ಹಾಗೂ ಬಂಧು-ಮಿತ್ರರು.






ಅಧ್ಯಕ್ಷರು, ಸಮತಾ ವಿದ್ಯಾಲಯ, ಕಂಚಿಕೆರೆ ಹಾಗೂ ಹರಪನಹಳ್ಳಿ ವಿಧನಾಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾದ

## ಶ್ರೀ ಎಂ.ಟಿ. ಸುಭಾಷ್ಚಂದ್ರ

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

ಹಿತೈಷಿಗಳು - ಸ್ನೇಹಿತರು - ಆತ್ಮೀಯರು - ಬಂಧುಗಳು

# ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಕೆ. ಸುರೇಶ್, ವಿದ್ಯಾನಗರ ಸರ್ಕಲ್, ಬ್ಯಾಂಕ್ ಆಫ್ ಬರೋಡಾ, ವಿದ್ಯಾನಗರ ಶಾಖೆ ಹತ್ತಿರ ಇವರು ಮಾಡುವ ವಿಜ್ಞಾಪನೆಗಳು.

ನಮ್ಮ ಪೂಜ್ಯ ತಂದೆಯವರಾದ

## ಶ್ರೀ ಎ. ಕೆಂಚಪ್ಪರೆಡ್ಡಿ

(ನಿವೃತ್ತ ಜಂಟಿ ಪ್ರಧಾನ ವ್ಯವಸ್ಥಾಪಕರು, VISL ಭದ್ರಾವತಿ)

ಇವರು, ದಿನಾಂಕ 6.8.2022ನೇ ಶನಿವಾರ ಮುಂಜಾನೆ 10.20ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರಯುಕ್ತ ವೈಕುಂಠ ಸಮಾರಾಧನೆಯನ್ನು ದಿನಾಂಕ 16.8.2022ನೇ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗ**

ಶ್ರೀಮತಿ ಕವಿತಾ ಡಾ. ಕೆ. ಉಮೇಶ್, ಶ್ರೀಮತಿ ಸುಮ ಡಾ. ಶಶಿಕಾಂತರೆಡ್ಡಿ
ಶ್ರೀನಿಧಿ ಅಕ್ಕೇರ, ಶ್ರೀ ನಿಶ್ಚಯ್ ಶಶಿಕಾಂತ, ಅಕ್ಕೇರ ಸಹೋದರರು

ವಿಳಾಸ : ತರಳಬಾಳು ಸಭಾ ಭವನ (ಮಿನಿಹಾಲ್) ಅನುಭವ ಮಂಟಪ, ಹದಡಿ ರೋಡ್, ದಾವಣಗೆರೆ.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ದಿ ಇಂಡಿಯನ್ ಸೌಹಾರ್ದ ಸಹಕಾರಿ ನಿಯಮಿತ, ಹರಿಹರ.

ಹೆಚ್.ಎಂ. ಬಸಪ್ಪ ಕಾಂಪ್ಲೆಕ್ಸ್, 1ನೇ ಮಹಡಿ, ಫಕ್ಕೀರಸ್ವಾಮಿ ಮಠದ ಹತ್ತಿರ, ಶಿವಮೊಗ್ಗ ರಸ್ತೆ, ಹರಿಹರ-577601. ಫೋ. : 93790 77001

## 4ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಸಹಕಾರಿಯ 4ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 15.08.2022 ನೇ ಸೋಮವಾರ ಬೆಳಿಗ್ಗೆ 11.00 ಘಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹುಲಿಗೇಶ್ ಸಿ.ಎನ್. ಇವರ ಅಧ್ಯಕ್ಷತೆಯಲ್ಲಿ ಐರಣಿ ಮಠ ಸಮುದಾಯ ಭವನದಲ್ಲಿ ಸಭೆ ಕರೆಯಲಾಗಿದೆ. ಸಹಕಾರಿಯ ಸರ್ವಸದಸ್ಯರುಗಳು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ಆಡಳಿತ ಮಂಡಳಿಯ ಸದಸ್ಯರು**




ಹುಲಿಗೇಶ್ ಸಿ.ಎನ್. ಅಧ್ಯಕ್ಷರು | ಪ್ರಭುದೇವ್ ಎಂ.ಬಿ. ಉಪಾಧ್ಯಕ್ಷರು | ಭಕ್ತಸಿಂಗ್ ನಿರ್ದೇಶಕರು | ಮಲ್ಲೇಶಪ್ಪ ಕೆ.ಹೆಚ್. ನಿರ್ದೇಶಕರು | ಜೋಸೆಫ್ ದಿವಾಕರ್ ನಿರ್ದೇಶಕರು | ಮಾರುತಿ ಶೆಟ್ಟಿ ನಿರ್ದೇಶಕರು | ರಿಯಾಜ್ ಅಹಮದ್ ನಿರ್ದೇಶಕರು



ಸೈಯದ್ ಆಸೀಫ್ ಅಹಮದ್, ನಿರ್ದೇಶಕರು | ಉಮಾಶಂಕರ್ ನಿರ್ದೇಶಕರು | ಜಗದೀಶ್ ಚೂರಿ ನಿರ್ದೇಶಕರು | ಸುಕುಮಾರ್ ಹೆಚ್.ಎಂ. ನಿರ್ದೇಶಕರು | ಶ್ರೀಮತಿ ವನಜಾಕ್ಷಿ ನಿರ್ದೇಶಕರು | ಶ್ರೀಮತಿ ಸುಜಾತ ಡ್ಯಾನಿಯಲ್, ನಿರ್ದೇಶಕರು

**ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಾಹಕರು**



ರವೀಂದ್ರನಾಥ್ ಆರ್.ಎಸ್. ಮು. ಕಾರ್ಯನಿರ್ವಾಹಣಾಧಿಕಾರಿ | ಕು|| ನಿಖಿತಾ ಕಲಾಲ್ ಲೆಕ್ಕಿಗರು | ರಿಚರ್ಡ್ ಟೈಸನ್ ನಗದು ಗುಮಾಸ್ತರು | ಚಂದ್ರಶೇಖರ್ ಎಸ್.ಎನ್. ಪಿಗ್ಮಿ ಸಂಗ್ರಾಹಕರು | ಮಂಜುನಾಥ್ ಎ. ಪಿಗ್ಮಿ ಸಂಗ್ರಾಹಕರು | ಹನುಮಂತಪ್ಪ ಟಿ.ಎಸ್. ಪಿಗ್ಮಿ ಸಂಗ್ರಾಹಕರು



ಸಂದೀಪ್ ಎಸ್.ಎನ್. ಪಿಗ್ಮಿ ಸಂಗ್ರಾಹಕರು | ಇಮ್ಯಾನುವೆಲ್ ಮಧುಕರ್ ಪಿಗ್ಮಿ ಸಂಗ್ರಾಹಕರು | ಮಲ್ಲೇಶ್ ಆರ್. ಪಿಗ್ಮಿ ಸಂಗ್ರಾಹಕರು | ಅನಿಲ್ ಪಿ.ಜಿ. ಪಿಗ್ಮಿ ಸಂಗ್ರಾಹಕರು | ರವಿಕುಮಾರ್ ಎಸ್. ಪಿಗ್ಮಿ ಸಂಗ್ರಾಹಕರು | ಸತೀಶ್ ಪಿ. ಪಿಗ್ಮಿ ಸಂಗ್ರಾಹಕರು | ಇರ್ಷದ್ ಅಲಿ ಪಿಗ್ಮಿ ಸಂಗ್ರಾಹಕರು

### ಠೇವಣಿಗಳ ಮೇಲಿನ ಬಡ್ಡಿ ದರ

| | |
|---|---|
| 1) 30 ದಿನಗಳ ಮೇಲ್ಪಟ್ಟು 90 ದಿನಗಳವರೆಗೆ | 6% |
| 2) 91ದಿನಗಳ ಮೇಲ್ಪಟ್ಟು 180 ದಿನಗಳವರೆಗೆ | 7% |
| 3) 181 ದಿನಗಳ ಮೇಲ್ಪಟ್ಟು 12 ತಿಂಗಳವರೆಗೆ | 8% |
| 4) 12 ತಿಂಗಳವರೆಗೆ ಮೇಲ್ಪಟ್ಟು 36 ತಿಂಗಳವರೆಗೆ | 9% |
| 5) 36 ತಿಂಗಳ ಮೇಲ್ಪಟ್ಟು | 10% |

7 ವರ್ಷ 1 ತಿಂಗಳಿಗೆ ನಿಮ್ಮ ಹಣ ದ್ವಿಗುಣವಾಗುವುದು.

### ಸಾಲಗಳ ಮೇಲಿನ ಬಡ್ಡಿ ದರಗಳು

| | |
|---|---|
| 1) ಹೊಸ ವಾಹನಾಧಾರಿತ ಸಾಲ | 12% |
| 2) ಜಾಮೀನು ಆಧಾರಿತ ಸಾಲ | 16% |
| 3) ಕಟ್ಟಡ ಆಧಾರಿತ ಸಾಲ | 13% |

ಹೊಸವಾಹನಕ್ಕೆ90%ಸಾಲವನ್ನುತಕ್ಷಣಮಾಡಿಕೊಡಲಾಗುವುದು.

**ಹಿರಿಯ ನಾಗರಿಕರಿಗೆ 12 ತಿಂಗಳ ಮೇಲ್ಪಟ್ಟ ಠೇವಣಿಗಳಿಗೆ ಶೇ. 1% ಹೆಚ್ಚುವರಿ ಬಡ್ಡಿ ಕೊಡಲಾಗುವುದು.**

| ಕ್ರ.ಸಂ. | ವಿವರ | 2019-2020 | 2020-2021 | 2021-2022 |
|---|---|---|---|---|
| 01 | ಸದಸ್ಯರ ಸಂಖ್ಯೆ | 1424 | 1605 | 1817 |
| 02 | ಸದಸ್ಯರ ಷೇರು | 59,61,000-00 | 78,88,000-00 | 1,07,71,500-00 |
| 03 | ಠೇವಣಿಗಳು | 2,48,91,654-00 | 3,56,31,242-00 | 6,80,91,848-00 |
| 04 | ಬಿಲ್ಡಿಂಗ್ ಫಂಡ್ | 1,54,821-00 | 24,04,837-00 | 72,37,339-56 |
| 05 | ಸಾಲಗಳು | 3,21,68,371-00 | 4,43,68,919-00 | 6,51,59,871-00 |
| 06 | ಲಾಭಾಂಶ | 10,99,680-00 | 15,26,361-56 | 16,32,923-00 |
| 07 | ವಾರ್ಷಿಕ ವ್ಯವಹಾರ | 23,19,60,513-00 | 40,57,58,795-00 | 67,35,10,768-00 |

ದಿನಾಂಕ : 21.07.2022
ಸ್ಥಳ : ಹರಿಹರ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
ರವೀಂದ್ರನಾಥ್ ಆರ್.ಎಸ್., ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ವಿ.ಸೂ. : ಈಗಾಗಲೇ ಸದಸ್ಯರಿಗೆ ಆಹ್ವಾನಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.

## ಇಂದು ಮಿಸ್ಟರ್-ಮಿಸಸ್ ಸ್ಪರ್ಧೆ

ದಾವಣಗೆರೆ, ಆ.14- ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆ.15ರಂದು ಮಿಸ್ಟರ್, ಮಿಸಸ್ ದಾವಣಗೆರೆ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಖುಷಿ ಇವೆಂಟ್ ಮಾಲೀಕ ಮಯೂರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಕಲ ಚೇತನರ ಜೀವನಕ್ಕೆ ಪ್ರೇರಣೆ ನೀಡುವ ಉದ್ದೇಶದಿಂದ ವಿಕಲಚೇತನರ ಶಾಲೆಯಲ್ಲಿ ಮಿಸ್ಟರ್ ಮತ್ತು ಮಿಸಸ್ ದಾವಣಗೆರೆ ಸ್ಪರ್ಧೆ ನಡೆಸಲಾಗುತ್ತಿದೆ ಎಂದರು.

ಬೆಳಿಗ್ಗೆ 8.30ಕ್ಕೆ ವೃತ್ತ ನಿರೀಕ್ಷಕ ಧ್ರುವ ಕುಮಾರ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಸ್ಪರ್ಧೆಗಳು ನಡೆಯಲಿವೆ. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ 300 ಅಭ್ಯರ್ಥಿಗಳ ಪೈಕಿ 70 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಹೈಪ್ ಆಪ್ ಮುಖ್ಯಸ್ಥ ಶಿವರತನ್, ಜಿ.ಎಸ್.ಎನ್. ಮಾಲೀಕ ಸಂತೋಷ್ ಏಕಬೋಟೆ, ಹ್ಯಾಪಿ ಇವೆಂಟ್ ಮಾಲೀಕ ಕಾರ್ತಿಕ್ ಹಿರೇಮಠ, ಗ್ರೀನಿ ಕಂಪನಿ ಸ್ಥಾಪಕ ಚೇತನ್ ಕುಮಾರ್, ಸುಹಿಲ್ ಇತರರು ಉಪಸ್ಥಿತರಿದ್ದರು.

## ರಾಷ್ಟ್ರ ನಿರ್ಮಾಣಕ್ಕೆ ಮುಡಿಪಾಗಲು ಕರೆ

**(5ನೇ ಪುಟದಿಂದ)** ಮಹಾನತೆ ಎಂಬ ಸಂದೇಶ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ನಮ್ಮಬಳಿ ಇರುವುದೆಲ್ಲ ಮಾತೃಭೂಮಿಯ ಕೊಡುಗೆಯಾಗಿದೆ. ಹೀಗಾಗಿ ದೇಶದ ಸುರಕ್ಷತೆ, ಸಮೃದ್ಧಿ ಹಾಗೂ ಪ್ರಗತಿಗಾಗಿ ನಮ್ಮ ಎಲ್ಲವನ್ನೂ ಅರ್ಪಣೆ ಮಾಡುವ ಸಂಕಲ್ಪ ತೊಡಬೇಕಿದೆ. ನಮ್ಮ ಅಸ್ತಿತ್ವ ಸಾಕ್ಷರತೆ ಮಹಾನ್ ಭಾರತದ ನಿರ್ಮಾಣಕ್ಕೆ ಮುಡಿಪಾಗಿರಬೇಕೆಂದು ಕರೆ ನೀಡಿದ್ದಾರೆ.

ಮಾತೃಭೂಮಿ ಹಾಗೂ ದೇಶವಾಸಿಗಳ ಉದ್ಧಾರಕ್ಕಾಗಿ ಸರ್ವಸ್ವ ಬಲಿದಾನ ಮಾಡುವುದು ನಮ್ಮ ಆದರ್ಶವಾಗಿದೆ. ಈ ಆದರ್ಶ ತಮ್ಮದಾಗಿಸಿಕೊಳ್ಳಬೇಕು ಎಂದೂ ರಾಷ್ಟ್ರಪತಿ ಹೇಳಿದ್ದಾರೆ.

# 20 ಲಕ್ಷ ರೂ. ಲಾಭದೊಂದಿಗೆ ಪ್ರಗತಿಯಲ್ಲಿ ಸಂಚಿತ ಕ್ರೆಡಿಟ್ ಸೊಸೈಟಿ

ದಾವಣಗೆರೆ, ಆ.14- 2000 ದ ಇಸವಿಯಲ್ಲಿ ಕೇವಲ 400 ಜನ ಸದಸ್ಯರಿಂದ 4 ಲಕ್ಷ ರೂ. ಬಂಡವಾಳದೊಂದಿಗೆ ಆರಂಭಗೊಂಡ ಸಂಚಿತ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ಪ್ರಸಕ್ತ 1386 ಸದಸ್ಯರನ್ನು ಹೊಂದಿದ್ದು, 43 ಲಕ್ಷದ 92 ಸಾವಿರ ರೂ. ಷೇರು ಬಂಡವಾಳ, 11 ಕೋಟಿ 78 ಲಕ್ಷ ರೂ. ಠೇವಣಿ, 14 ಕೋಟಿ 18 ಲಕ್ಷ ರೂ. ದುಡಿಯುವ ಬಂಡವಾಳದೊಂದಿಗೆ ಸುಭದ್ರವಾಗಿದ್ದು, ಒಂದು ಕೋಟಿ 28 ಲಕ್ಷ ರೂ. ಕಾಯ್ದಿಟ್ಟ ನಿಧಿಯೊಂದಿಗೆ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಸೊಸೈಟಿಯ ಅಧ್ಯಕ್ಷ ಟಿ.ಎಂ. ಪಾಲಾಕ್ಷ ಹೇಳಿದರು.

ಸೊಸೈಟಿಯ 22ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು, ಸಾಲಗಳ ಸುಸ್ತಿ ಬಾಕಿ ಪ್ರಮಾಣ ಕೇವಲ 2.3 ರಷ್ಟಿದ್ದು ಇದನ್ನು ಶೇ. 2 ಕ್ಕಿಂತ ಕಡಿಮೆಗೊಳಿಸುವ ಯೋಜನೆ ಇದೆ. ಷೇರು ಬಂಡವಾಳವನ್ನು 45 ಲಕ್ಷ ರೂ.ಗೆ ಏರಿಸಿಕೊಂಡು ಠೇವಣಿಗಳ ಸಂಗ್ರಹಣೆ ಮೊತ್ತವನ್ನು 13 ಕೋಟಿ ರೂಪಾಯಿಗೂ, ಸಾಲ ಮತ್ತು ಮುಂಗಡಗಳ ಪ್ರಮಾಣವನ್ನು 12 ಕೋಟಿ ರೂ.ಗಳಿಗೂ ದುಡಿಯುವ ಬಂಡವಾಳ ಮೊತ್ತವನ್ನು 15 ಕೋಟಿ ರೂ.ಗಳಿಗೆ ಹೆಚ್ಚಿಸುವ ಯೋಜನೆಯೂ ಇದೆ. ಆಡಳಿತ ಮಂಡಳಿ ಸದಸ್ಯರುಗಳ, ಸೊಸೈಟಿಯ ಸಿಬ್ಬಂದಿಗಳ, ಗ್ರಾಹಕರ, ಠೇವಣಿದಾರರ,



ಸದಸ್ಯರು ಗಳ ಸಹಕಾರದಿಂದ ಇದು ಸಾಧ್ಯವಾಗಲಿದೆ ಎಂದರು.

ಬೃಹತ್ ಬ್ಯಾಂಕುಗಳ ಪೈಪೋಟಿ, ಆಧುನಿಕ ತಂತ್ರಜ್ಞಾನದ ವೇಗ ಹಾಗೂ ಕೋವಿಡ್‌ನಂತಹ ಸಾಂಕ್ರಾಮಿಕದಲ್ಲೂ ಸಂಚಿತ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ಅಭಿವೃದ್ಧಿ ಪಥದಲ್ಲಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ನೆರವೇರಿದ ಮಹಾಸಭೆಯ ಆರಂಭದಲ್ಲಿ ಶ್ರೀಮತಿ ಶಶಿಕಲಾ ರುದ್ರಯ್ಯ, ಪಿ. ಹೇಮಲತಾ, ಎಂ.ಎಂ. ರಾಜಶ್ರೀ ಪ್ರಾರ್ಥನಾ ಗೀತೆ ಹಾಡಿದರು.

ನಿರ್ದೇಶಕ ಎಸ್.ವಿ. ರುದ್ರಮುನಿ ಸ್ವಾಗತಿಸಿದರು.

ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡಾವಳಿ ವಾಚಿಸಿದ ಸಂಘದ ಕಾರ್ಯದರ್ಶಿ ಜೆ. ವಿಜಯಕುಮಾರ್ ಅನುಮೋದನೆ ಪಡೆದರು. 31.03.2022 ಕ್ಕೆ ಅಂತ್ಯಗೊಳ್ಳುವ 2021-22 ನೇ ಸಾಲಿನ ಆಢಾವೆ ಪತ್ರಿಕೆ, ಲಾಭ-ನಷ್ಟಗಳ ಲೆಕ್ಕ ಪರಿಶೋಧಕರ ವರದಿಯನ್ನು ನಿರ್ದೇಶಕ ಎ.ಹೆಚ್. ಕುಮಾರ್ ಮಂಡಿಸಿ ಅನುಮೋದನೆ ಪಡೆದರು. 2021-22 ನೇ ಸಾಲಿನ ಲಾಭ ವಿಭಾಗಣೆಯನ್ನು ನಿರ್ದೇಶಕರಾದ ಜೆ. ಸಂಜಯಕುಮಾರ್ ನೆರವೇರಿಸಿ, ಅನುಮೋದನೆ ಪಡೆದರು.

2021-22ನೇ ಸಾಲಿನ ಮುಂಗಡ ಪತ್ರಕ್ಕಿಂತಾ ಅಧಿಕಗೊಂಡ ವೆಚ್ಚ ಹಾಗೂ 2022-23ನೇ ಸಾಲಿನ ಮುಂಗಡವನ್ನು ಸಭೆಯ ಮುಂದಿಟ್ಟು ನಿರ್ದೇಶಕರಾದ

**ಸಂಘದ 22ನೇ ಮಹಾಸಭೆಯಲ್ಲಿ ಅಧ್ಯಕ್ಷ ಟಿ.ಎಂ. ಪಾಲಾಕ್ಷಪ್ಪ**

ಪಿ.ಎಂ. ವೀರಭದ್ರಯ್ಯ ಅನುಮೋದನೆ ಪಡೆದರು.

ಲೆಕ್ಕ ಪರಿಶೋಧಕರ ನೇಮಕದ ಪ್ರಕ್ರಿಯೆಗೆ ನಿರ್ದೇಶಕರಾದ ಎಂ.ಎಂ. ರಾಜಶ್ರೀ ಅನುಮೋದನೆ ಪಡೆದರೆ, ಸೊಸೈಟಿಯ 2022-23 ನೇ ಸಾಲಿನ ಯೋಜನೆಗಳ ಬಗ್ಗೆ ನಿರ್ದೇಶಕರಾದ ಪಿ.ಹೇಮಲತಾ ಹೇಳಿದರು.

ನಿರ್ದೇಶಕರುಗಳಾದ ಜಿ.ವೈ. ಭೋಜರಾಜ್, ಎಸ್.ಹೆಚ್. ಚಂದ್ರಕಲಾ, ಟಿ.ಎಂ. ವಿನಯ್, ಹೆಚ್.ಜಿ. ವಿಜಯಕುಮಾರ್, ಅಭಿಷೇಕ್‌ಚಾರಿ ಎನ್.ಪಿ. ಭಾಗವಹಿಸಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳಾದ ಅಮೂಲ್ಯ ಜಿ.ಎಸ್., ಸಮಿತಾ ಜೆ, ತರುಣ್ ಕೆ.ಎಂ. ಅಮೃತ, ಪಿ. ಪ್ರಜ್ವಲ್ ಎನ್.ಎಸ್. ತನ್ಮಯ್, ಭುವನ್ ಎನ್.ಎಸ್.ರನ್ನು ಪುರಸ್ಕರಿಸಿ, ಗೌರವಿಸಲಾಯಿತು. ಮಹಾಸಭೆಯನ್ನು ದೀಪ ಬೆಳಗಿಸಿ ಉದ್ಘಾಟಿಸುವಾಗ ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರುಗಳೊಂದಿಗೆ ಶಿವಯೋಗಪ್ಪ ಮತ್ತು ವೀರಯ್ಯನವರೂ ಇದ್ದರು.

ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಅವರು ಮಹಾಸಭೆಯ ಪ್ರಸ್ತುತಿಯನ್ನು ನೆರವೇರಿಸಿಕೊಟ್ಟರು.

# ದಾವಣಗೆರೆ ಜಿಲ್ಲೆ : ಬೆಳ್ಳಿ ಹೆಜ್ಜೆ - ಅಭಿವೃದ್ಧಿ ಆಮೆ ಹೆಜ್ಜೆ

**(5ನೇ ಪುಟದಿಂದ)** ರ ಆಗಸ್ಟ್ 15 ರಂದು ದಾವಣಗೆರೆ ಜಿಲ್ಲೆಯನ್ನು ಉದ್ಘಾಟಿಸಿದರು. ಎ.ಪಿ.ಎಂ.ಸಿ. ಕಟ್ಟಡದಲ್ಲಿ ದಾವಣಗೆರೆ ಜಿಲ್ಲಾ ಕಛೇರಿ ಪ್ರಾರಂಭ ಆಯ್ತು.

ಚನ್ನಗಿರಿ ತಾಲ್ಲೂಕು ಮೂಲತಃ ಶಿವಮೊಗ್ಗ ಜಿಲ್ಲೆಗೆ ಸೇರಿದ್ದು, ಪಟೇಲ್ ಅವರ ಊರು ಕಾರಿಗನೂರು ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿತ್ತು. ಆದರೆ ಪಟೇಲರಿಗೆ ದಾವಣಗೆರೆ ಹತ್ತಿರ. ಇಂಟರ್ ಮಿಡಿಯೇಟ್ ಶಿಕ್ಷಣ ಪಡೆದದ್ದು ಇಲ್ಲಿಯೇ. ಮುಂದೆ ರಾಜಕಾರಣ ಆರಂಭಿಸಿದ ಮೇಲೂ ಮಿತ್ರರೊಡನೆ ಸಂಜೆ ಮನರಂಜನೆಗಾಗಿ ಇಸ್ಪೀಟ್ ಆಡಲು ಬರುತ್ತಿದ್ದದ್ದೂ ದಾವಣಗೆರೆ ಕ್ಲಬ್ಬಿಗೇ... ಹೀಗಾಗಿ ತಮ್ಮ ಚನ್ನಗಿರಿಯನ್ನು ಸೇರಿದಂತೆ ಹರಪನಹಳ್ಳಿ, ಹೊನ್ನಾಳಿಗಳನ್ನು ದಾವಣಗೆರೆ ಜಿಲ್ಲೆಯ ತೆಕ್ಕೆಗೆ ಎಳೆತಂದಿದ್ದರು.

ಯಾವ ಆಡಳಿತ ಜನರಿಗೆ ಹತ್ತಿರದಿಂದ, ಸುಲಭವಾಗಿ ಸಿಗಲಿ ಎಂಬ ಆಶಯ ಜೆ.ಹೆಚ್. ಪಟೇಲರಿಗೆ ಇತ್ತೋ, ಪ್ರಸ್ತುತ ಅಷ್ಟೊಂದು ಪೂರಕವಾಗಿ ದಾವಣಗೆರೆ ಜಿಲ್ಲಾ ಆಡಳಿತ ವ್ಯವಸ್ಥೆ ಆಗಲಿಲ್ಲ ಎಂಬುದು ಅಷ್ಟೇ ಕಟು ಸತ್ಯ...!

ದಾವಣಗೆರೆ ಜಿಲ್ಲೆಯ ಶಕ್ತಿ ಕೇಂದ್ರ 'ಜಿಲ್ಲಾಧಿಕಾರಿ' ಕಛೇರಿಯ ಸ್ವಂತ ಕಟ್ಟಡವಾಗಿ ಬಾಗಿಲು ತೆರೆದದ್ದು 2012 ರಲ್ಲಿ ಎಂಬುದನ್ನು ಗಮನಿಸಿದಾಗ; ಜೆ.ಹೆಚ್. ಪಟೇಲರ ನಂತರ ಬಂದ ಸರ್ಕಾರಗಳು ದಾವಣಗೆರೆಯನ್ನು ನಿರ್ಲಕ್ಷಿಸಿದರೇ ಎಂಬ ಅನುಮಾನ ಬರುತ್ತದೆ.

ಇದಲ್ಲದೇ ದಾವಣಗೆರೆ ಜಿಲ್ಲೆಯ ಬಹುಮುಖ್ಯ ಸರ್ಕಾರಿ ಕಛೇರಿಗಳ ಕಟ್ಟಡಗಳು ಚಾನಾಭಿದ್ರಿ...! ದಕ್ಷಿಣ ದಿಕ್ಕಿನ ಹೆದ್ದಾರಿ ಬಳಿ ಮುಖ ಮಾಡಿ ಜಿಲ್ಲಾ ಪಂಚಾಯಿತಿ ಕಟ್ಟಡ ನಿರ್ಮಾಣಗೊಂಡರೆ 'ಜಿಲ್ಲೆಯಾಗಿ ಸುಮಾರು ಹದಿನೈದು ವರ್ಷಗಳ ನಂತರ' ಉತ್ತರ ದಿಕ್ಕಿನ ಹರಿಹರ ರಸ್ತೆಗೆ ಹೊಂದಿಕೊಂಡು ಜಿಲ್ಲಾಧಿಕಾರಿ ಕಛೇರಿಯು ಕಷ್ಟಪಟ್ಟು 'ರಾಜಕೀಯ ನಾಯಕರುಗಳ ಹಗ್ಗ-ಜಗ್ಗಾಟದಲ್ಲಿ' ಗೆದ್ದು ಎದ್ದು ನಿಂತಿತು. ಒಂದು ಪಕ್ಷದವರು ಜಿಲ್ಲಾ ಪಂಚಾಯಿತಿ ಕಟ್ಟಡ ಬಳಿಯೇ ಜಿಲ್ಲಾಧಿಕಾರಿ ಕಛೇರಿ ಕಟ್ಟಡ ಇರಲೆಂದರೆ, ಇನ್ನೊಂದು ಪಕ್ಷ 'ದೇವರಾಜ ಅರಸ್ ಬಡಾವಣೆ' ಅನ್ನುತ್ತಿತ್ತು. ಆ ವೇಳೆಗೆ ಆಗಲೇ 'ಡಿ.ಸಿ. ಕಛೇರಿಗೆ ಕಾಯ್ದಿರಿಸಿದ್ದ ಅರಸ್ ಬಡಾವಣೆ ಜಾಗವನ್ನು ವಿಲೇವಾರಿ ಮಾಡಿ ಕೈತೊಳೆದುಕೊಳ್ಳಲಾಗಿತ್ತು.'

ದಾವಣಗೆರೆ ಜಿಲ್ಲೆಗೆ ಈಗ ಇಪ್ಪತ್ತೈದು ವರ್ಷ ತುಂಬಿ ಪ್ರೌಢಾ ವಸ್ಥೆಯಲ್ಲಿದೆ. ಆದರೆ ಆಡಳಿತಾತ್ಮಕ ದೃಷ್ಟಿಯಿಂದ ಸಾಮಾನ್ಯ ಜನರಿಗೆ ತುಂಬಾ ತೊಂದರೆ... ಏಕೆಂದರೆ, 'ಯಾವ ಯಾವ ಕಛೇರಿ' ಎಲ್ಲಿವೆ ಎಂಬುದು ಸಾಮಾನ್ಯ ಜನರಿಗೆ ಈಗಲೂ ಗೊಂದಲ...!

ತಾಲ್ಲೂಕು ಕಛೇರಿ, ಸಬ್ ರಿಜಿಸ್ಟ್ರರ್ ಅಂಥ ಕಛೇರಿಗಳಿಗೆ ಈಗ ಸ್ವಂತ ಕಟ್ಟಡಗಳಿಲ್ಲ. ಅವುಗಳಿಗಾಗಿ ನಿರ್ಮಾಣ ಆಗುತ್ತಿರುವ ಕಟ್ಟಡಗಳ ಕಾಮಗಾರಿ ನರಳುತ್ತಾ ನರಳುತ್ತಾ ಮೇಲೇಳುತ್ತಿವೆ. ಹತ್ತಾರು ಪ್ರಮುಖ ಇಲಾಖೆ ಕಟ್ಟಡಗಳನ್ನು ಎಲ್ಲಿ ನಿರ್ಮಾಣ ಮಾಡಬೇಕು ಎಂಬ ಜಿಜ್ಞಾಸೆ ಕೂಡಾ ನಮ್ಮ ಆಡಳಿತಗಾರರನ್ನು ಕಾಡುತ್ತಿದೆ. ಕಡಿಮೆ ಅಂದರೂ ಇಪ್ಪತ್ತು ಇಲಾಖೆಗಳು ಈಗಲೂ ಬಾಡಿಗೆ ಕಟ್ಟಡದಲ್ಲಿ ತಮ್ಮ ಆಡಳಿತ ನಡೆಸಿವೆ.

ಈ ಸಮಸ್ಯೆ ಒಂದು ಕಡೆ ಆದರೆ ನಿರ್ಮಾಣಗೊಂಡ ಕಟ್ಟಡಗಳಲ್ಲಿ ಅನೇಕವು ಹಾಳು ಬಿದ್ದಿವೆ. ಉದಾಹರಣೆಗೆ: ದಾವಣಗೆರೆ ಎಸ್ಪಿ ಅವರ, ಡಿ.ಸಿ. ಅವರ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯಾಧಿಕಾರಿಗಳ ಅಧಿಕೃತ ವಾಸದ ಮನೆಗಳು ಹಾಗೂ ಅವರ ಸಿಬ್ಬಂದಿಗಳಿಗೆ ನಿರ್ಮಿಸಿದ ಮನೆಗಳು...!

ಈ ಕಟ್ಟಡಗಳು ನಿರ್ಮಾಣ ಆಗಿರುವುದು ಎಸ್.ಎಸ್. ಹೈಟೆಕ್ ಆಸ್ಪತ್ರೆ ಬಳಿ. ಇವುಗಳನ್ನು ನಗರದಿಂದ ಭಯಂಕರ ದೂರ ಕಟ್ಟಿಸಿದ್ದಾರೆ ಎಂದು ಅಧಿಕಾರಿಗಳು ಅಲ್ಲಿಗೆ ಹೋಗುತ್ತಿಲ್ಲ. ಆ ಕಟ್ಟಡಗಳಲ್ಲಿ ಕೆಲವನ್ನು ಈಗ ಬಾಡಿಗೆ ನೀಡಲಾಗಿದೆಯೆಂತೆ...!

ಇನ್ನು ದಾವಣಗೆರೆ ನಗರವನ್ನು ಸ್ಮಾರ್ಟ್‌ಸಿಟಿ ಮಾಡಲು ಕೇಂದ್ರ ಸರ್ಕಾರ ಆದ್ಯತೆ ಮೇಲೆ ಆಯ್ಕೆ ಮಾಡಿತು. ಆದರೆ ಕೆಲಸ ತೀರಾ ಮಂದಗತಿಯಲ್ಲಿ ಸಾಗಿದೆ. ಸ್ಮಾರ್ಟ್‌ಸಿಟಿಗೆ ಆಯ್ಕೆಯಾದ ಮೊದಲೆರಡು ವರ್ಷ ಯೋಜನೆ ನೀಲ ನಕಾಶೆಗೆ ಹೋಯ್ತು. ಕೆಲಸ ಚುರುಕು ಪಡೆದುಕೊಳ್ಳುವ ವೇಳೆ 'ಕರೋನ ಬಂತು'...

ಇಷ್ಟೇ ಅಲ್ಲ; ನಗರಪಾಲಿಕೆ, ಕೆ.ಯು.ಡಬ್ಲ್ಯು.ಎಸ್., ಸ್ಮಾರ್ಟ್ ಸಿಟಿ ಅಧಿಕಾರಿಗಳು ಹಾಗೂ ಇಂಜಿನೀಯರಿಂಗ್ ವಿಭಾಗದ ಅಧಿಕಾರಿಗಳಿಗೆ ಇರುವ ಸಮನ್ವಯದ ಕೊರತೆಯಿಂದಾಗಿ ಮಾಡಿದ ರಸ್ತೆಗಳನ್ನು, ಚರಂಡಿಗಳನ್ನು ಅಗಿ-ಬಗಿ, ತಗಿ-ಮುಚ್ಚು ಕೆಲಸಗಳೇ ಹೆಚ್ಚಾಗಿವೆ. ಡೆಂಟಲ್ ಕಾಲೇಜು ರಸ್ತೆ ಇದಕ್ಕೆ ಈಗಲೂ ಜೀವಂತ ಸಾಕ್ಷಿ. ಅಷ್ಟರ ಮಟ್ಟಿಗೆ ಇಲಾಖೆಗಳ ಮಧ್ಯದಲ್ಲಿ ಸಮನ್ವಯದ ಕೊರತೆ, ನಿರ್ಲಕ್ಷ್ಯ ಮನೋಭಾವವನ್ನು ದಾವಣಗೆರೆ ಜಿಲ್ಲೆಯ ಬೆಳ್ಳಿ ಹಬ್ಬದ ಈ ಸಂದರ್ಭದಲ್ಲಿ ನಾವು ಕಾಣುತ್ತಿದ್ದೇವೆ.

ಇನ್ನು ರಿಂಗ್ ರಸ್ತೆ ಮುಕ್ಕಾಲು ಪಾಲು ಆದರೂ ಪರಿಪೂರ್ಣ ಉಪಯೋಗಕ್ಕೆ ಬರದಂತೆ ಆಗಿದೆ. ಬೇತೂರಿನಿಂದ ಬಸಾಪುರ ಮೂಲಕ ಆವರಗೆರೆಗೆ ಹಳ್ಳದ ಎರಡೂ ಬದಿಯಲ್ಲಿ ಹಿಂದಿನ ಸರ್ಕಾರ ನಿರ್ಮಿಸಿದ ಯೋಜನೆ ಈ ಐದು ವರ್ಷಗಳಲ್ಲಿ ಸ್ತಬ್ಧವಾಗಿದೆ. ಇನ್ನು ನಾಲ್ಕೈದು ಕೋಟಿ ಖರ್ಚು ಮಾಡಿ ಈ ರಿಂಗ್ ರಸ್ತೆ ಪೂರ್ಣಗೊಳಿಸಿದ್ದರೆ ದಾವಣಗೆರೆ ನಗರದ ಒಳಗಿನ ಶೇಕಡ ಹದಿನೈದರಷ್ಟು ಸಂಚಾರ ವ್ಯವಸ್ಥೆ ಸುಗಮ ಆಗುತ್ತಿತ್ತು. ಅಷ್ಟರ ಮಟ್ಟಿಗೆ ಇಂಧನ ಉಳಿತಾಯ ಆಗುತ್ತಿತ್ತು. ಈ ಸರ್ಕಾರ ಏಕೆ ಈ ಇಷ್ಟು ಕಾಮಗಾರಿ ಪೂರ್ಣಗೊಳಿಸುತ್ತಿಲ್ಲ ಅರ್ಥ ಆಗುತ್ತಿಲ್ಲ ಅನ್ನುತ್ತಿದ್ದಾರೆ ಹಳೇ ದಾವಣಗೆರೆ ನಿವಾಸಿಗಳು.

ಜಿಲ್ಲಾ ಪಂಚಾಯಿತಿ ಆಡಳಿತ ಕೂಡಾ ಇಂಥವೇ ನ್ಯೂನತೆಗಳಿಂದ ಕೂಡಿದೆ ಎಂಬುದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರ ಅಭಿಪ್ರಾಯ. ಪಟ್ಟಣ ಪರಿಸರದ ಹಳ್ಳಿಗಳ ಕೆಲಸ ಆಗುತ್ತವೆ. ದೂರದ ಹಳ್ಳಿಗಳ ಗೋಳು 'ಅದೇ ಹಳೆಯ ಗೋಳು' ಅನ್ನುತ್ತಾರೆ ಆ ಮಾಜಿ ಸದಸ್ಯರು.

ಒಟ್ಟಾರೆ ಇಂಥ ಕೊರತೆ ನರಳಾಟಗಳ ನಡುವೆ ಆಗಸ್ಟ್-15 ರಂದು ದಾವಣಗೆರೆ ಜಿಲ್ಲೆ ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿದೆ. ಆದರೆ ತಾನು ಅಂದುಕೊಂಡಷ್ಟು ನನ್ನ ಜಿಲ್ಲೆ ಅಭಿವೃದ್ಧಿ ಆಗಲಿಲ್ಲ ಎಂದು ಜೆ.ಹೆಚ್. ಪಟೇಲರ ಆತ್ಮ ಅಂದುಕೊಳ್ಳುತ್ತಿದೆಯಾ ?.

## ನಗರದಲ್ಲಿ ಇಂದು ರಂಗೋಲಿ ಸ್ಪರ್ಧೆ

ಸಂಕಲ್ಪ ಸೇವಾ ಫೌಂಡೇಶನ್ ವತಿಯಿಂದ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಮಹಿಳೆಯರಿಗೆ ಜಿಲ್ಲಾಮಟ್ಟದ ರಂಗೋಲಿ ಸ್ಪರ್ಧೆ ಇಂದು ಬೆಳಿಗ್ಗೆ 10.30 ರಿಂದ 11.30 ರವರೆಗೆ ಗುರುಭವನದಲ್ಲಿ ಆಯೋಜಿಸಲಾಗಿದೆ.

## ಕನ್ನಿಕಾ ಪರಮೇಶ್ವರಿ ಬ್ಯಾಂಕಿಗೆ 3.50 ಕೋಟಿ ಲಾಭ

**(5ನೇ ಪುಟದಿಂದ)** ಗಳನ್ನು ನಗರದ ಶ್ರೀ ಕನ್ನಿಕಾಪರಮೇಶ್ವರಿ ಬ್ಯಾಂಕ್ ಗಳಿಸಿದೆ.

ಕಳೆದ ವರ್ಷಗಳಲ್ಲಿ ಘೋಷಿಸಿದಂತೆ ಈ ಸಾಲಿನಲ್ಲಿಯೂ ಶೇ.18 ರಷ್ಟು ಡಿವಿಡೆಂಡನ್ನು ಸದಸ್ಯ ಬಾಂಧವರಿಗೆ ವಿತರಿಸಲು ಆಡಳಿತ ಮಂಡಳಿಯು ತೀರ್ಮಾನ ಕೈಗೊಂಡಿರುತ್ತದೆ ಎಂದು ಬ್ಯಾಂಕಿನ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ ಹರ್ಷ ವ್ಯಕ್ತಪಡಿಸಿರುತ್ತಾರೆ.

ಹಣಕಾಸು ವರ್ಷ 2021-22ನೇ ಸಾಲಿನ ಅಂತ್ಯಕ್ಕೆ ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೂನ್ಯ ಪ್ರಮಾಣಕ್ಕೆ ತರಲು ಸಹಕರಿಸಿದ ಸದಸ್ಯ ಬಾಂಧವರಿಗೆ, ಗ್ರಾಹಕರಿಗೆ, ಸಾಲಗಾರರಿಗೆ ಆಡಳಿತ ಮಂಡಳಿಯ ಪರವಾಗಿ ಅವರು ಧನ್ಯವಾದ ಹೇಳಿದರು.

ಹಣಕಾಸು ವರ್ಷ 2022-23ನೇ ಸಾಲಿನಲ್ಲಿ ಐ.ಆರ್.ಡಿ.ಎ.ಐ. ಸಂಸ್ಥೆ ಅಡಿಯಲ್ಲಿ ನೇರ ವಿಮಾ ಏಜೆನ್ಸಿ ಪಡೆದು, ಸಹಕಾರಿ ವಿಮಾ ಸಂಸ್ಥೆಯಾದ ಇಫ್ಕೋ-ಟೋಕಿಯೋ ಇವರೊಂದಿಗೆ ವಿಮಾ ಪಾಲಿಸಿಗಳನ್ನು ಮಾಡಲು ದ್ವಿಪಕ್ಷೀಯ ಒಡಂಬಡಿಕೆಯನ್ನು ಮಾಡಿಕೊಂಡು ಗ್ರಾಹಕರಿಗೆ, ಸದಸ್ಯರಿಗೆ ಸಾಮಾನ್ಯ ವಿಮೆ ಮತ್ತು ಜೀವ ವಿಮಾ ಪಾಲಿಸಿಗಳನ್ನು ವಿತರಣೆ ಮಾಡಲು ಕಾರ್ಯ ಯೋಜನೆ ಹಮ್ಮಿಕೊಳ್ಳಲಾಗಿದೆ. 2022-23ನೇ ಸಾಲಿನ ಅಂತ್ಯಕ್ಕೆ ರೂ.150 ಕೋಟಿಗಳ ಠೇವಣಿ ಸಂಗ್ರಹದ ಗುರಿಯ ಜೊತೆಗೆ, ರೂ.115 ಕೋಟಿಗಳ ಸಾಲ ಮುಂಗಡ ಗಳನ್ನು ನೀಡುವ ಮೂಲಕ ರೂ.400 ಲಕ್ಷಗಳ ನಿವ್ವಳ ಲಾಭ ಗಳಿಸುವ ಉದ್ದೇಶ ಹೊಂದಿರುತ್ತೇವೆ ಎಂದಿದ್ದಾರೆ.

ಚನ್ನಗಿರಿ ಪಟ್ಟಣದಲ್ಲಿರುವ ತೋಟ ಉತ್ಪನ್ನಗಳ ಮಾರಾಟ ಸಂಸ್ಥೆಯ ಶಿಫಾರಸ್ಸಿನಂತೆ ಸಣ್ಣ, ಅತಿ ಸಣ್ಣ ರೈತರಿಗೆ ಕಿರು ಸಾಲದ ಯೋಜನೆ ಅಡಿಯಲ್ಲಿ ಹೆಚ್ಚು ಹೆಚ್ಚು ಸಾಲ ನೀಡುವ ಮೂಲಕ ರೈತರ ಆರ್ಥಿಕ ವ್ಯವಹಾರಗಳಿಗೆ ಉತ್ತೇಜಿಸುತ್ತಿದೆ ಎಂದು ತಮ್ಮ ಹರ್ಷ ವ್ಯಕ್ತಪಡಿಸಿದರು.

ನಿವ್ವಳ ಎನ್.ಪಿ.ಎ. ಪ್ರಮಾಣವನ್ನು ಶೂನ್ಯ ಪ್ರಮಾಣಕ್ಕೆ ತರಲು ಸಹಕರಿಸಿದ ಎಲ್ಲಾ ಸದಸ್ಯ ಬಾಂಧವರಿಗೂ ಹಾಗೂ ಸಾಲಗಾರ ಬಂಧುಗಳಿಗೂ ಕೃತಜ್ಞತೆ ಸಲ್ಲಿಸಿದರು.

11ನೇ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳ ಪ್ರತಿಭೆಯನ್ನು ಗುರುತಿಸಿ 23 ವಿದ್ಯಾರ್ಥಿಗಳಿಗೆ ರಜತ ಪದಕದೊಂದಿಗೆ ಪುರಸ್ಕರಿಸಲಾಯಿತು. 2ನೇ ಸಾಧಕರಿಗೆ ಸಾಧನಾ ಪ್ರಶಸ್ತಿಯನ್ನು ನೀಡಲು ಹಮ್ಮಿಕೊಂಡಿದ್ದು ಈ ಸಾಧನಾ ಪ್ರಶಸ್ತಿ ಕಾರ್ಯಕ್ರಮದಲ್ಲಿ 'ಕನ್ನಿಕಾ ಎಕ್ಸಲೆನ್ಸ್ ಅವಾರ್ಡ್ 2022' ಅನ್ನು 6 ಸಾಧಕರಿಗೆ ರಜತ ಪದಕದೊಂದಿಗೆ ಗೌರವಿಸಲಾಯಿತು ಹಾಗೂ ಆರ್ಥಿಕವಾಗಿ ಹಿಂದುಳಿದ ಸದಸ್ಯರ 89 ಮಕ್ಕಳಿಗೆ ಇದೇ ಸಂದರ್ಭದಲ್ಲಿ ವಿದ್ಯಾರ್ಥಿ ವೇತನವನ್ನು ಸಾಮಾಜಿಕ ಒಳಿತು ನಿಧಿಯಿಂದ ವಿತರಣೆ ಮಾಡಲಾಯಿತು.

ಹಣಕಾಸು ವರ್ಷ 2021-22ನೇ ಸಾಲಿನಲ್ಲಿ ವಿವಿಧ ಕಾರಣಗಳಿಂದ 53 ಸದಸ್ಯರು ದೈವಾಧೀನರಾಗಿದ್ದು, ಇವರುಗಳ ವಾರಸುದಾರರಿಗೆ ಬ್ಯಾಂಕಿನ ನಿಯಮಗಳ ಅನ್ವಯ ಒಟ್ಟು ರೂ.3 ಲಕ್ಷ 92 ಸಾವಿರಗಳ ಸಹಾಯ ಧನವನ್ನು ವೈದಿಕ ಕ್ರಿಯಾದಿಗಳಿಗಾಗಿ ನೀಡಲಾಗಿದೆ.

ಕೋವಿಡ್ ಕಾರಣದಿಂದಾಗಿ ಕಳೆದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲಾಗಿತ್ತು. ಪ್ರಸಕ್ತ 2021-22ನೇ ಸಾಲಿನ 56ನೇ ವಾರ್ಷಿಕ ಮಹಾಸಭೆಯನ್ನು ಸದಸ್ಯರ ಸಮಕ್ಷಮದಲ್ಲಿ ನಡೆಸಲು ಅವಕಾಶ ಇರುವುದರಿಂದ ಬ್ಯಾಂಕಿನ ವಾರ್ಷಿಕ ಮಹಾಸಭೆ ಯನ್ನು ಶ್ರೀ ಕಾಸಲ್ ಎಸ್. ವಿಠ್ಠಲ್ ಶ್ರೀಮತಿ ಸುನಂದಮ್ಮ ಕಲ್ಯಾಣ ಮಂಟಪದ ನಿನ್ನೆಲ್ಲಿ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಆರ್.ಎನ್. ಸುಜಾತ, ನಿರ್ದೇಶಕರಾದ ಆರ್.ಎಲ್. ಪ್ರಭಾಕರ್, ಕಾಸಲ್ ಎಸ್. ಸತೀಶ್, ಎನ್. ಕಾಶೀನಾಥ್, ಕೆ.ಎನ್. ಅನಂತರಾಮ ಶೆಟ್ಟಿ, ಎ.ಎಸ್. ಸತ್ಯನಾರಾಯಣ ಸ್ವಾಮಿ, ಕೆ.ವಿ. ಮಂಜುನಾಥ, ಜೆ. ರವೀಂದ್ರ ಗುಪ್ತ, ಬಿ.ಎಸ್. ಶಿವಾನಂದ, ವೈ.ಬಿ. ಸತೀಶ್, ಬಿ.ಎಸ್. ರಾಘವೇಂದ್ರ ಶೆಟ್ಟಿ, ಶ್ರೀಮತಿ ಗೀತಾರಾಂ ಕೆ.ಎಂ., ವೃತ್ತಿಪರ ನಿರ್ದೇಶಕರುಗಳಾದ ಶ್ರೀಧರ್ ಜಿ., ನಾಗರಾಜ ಶೆಟ್ಟಿ ಆರ್., ಪ್ರಧಾನ ವ್ಯವಸ್ಥಾಪಕ ಪಡಗಲ್ ಪ್ರಶಾಂತ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಭೀಮಾನಂದ ಶೆಟ್ಟಿ, ಶಾಖಾ ಮುಖ್ಯಸ್ಥರಾದ ಎಸ್.ಆರ್. ವಿಜಯ್‌ಕುಮಾರ್, ಎನ್. ಪ್ರಸಾದ್ ಮತ್ತು ಸಂದೇಶ್ ಟೀಕಾ ಮತ್ತಿತರರು ಉಪಸ್ಥಿತರಿದ್ದರು.

# ರಕ್ಷಣಾ ವೇದಿಕೆ ಹೆಸರಿನಲ್ಲಿ ಬೆದರಿಸಿ ಹಣ ವಸೂಲಿ, ನಾಲ್ವರ ಬಂಧನ : ನಗದು ವಶ



ದಾವಣಗೆರೆ, ಆ.14- ರಕ್ಷಣಾ ವೇದಿಕೆಯವರೆಂದು ಹೇಳಿ ಯುವತಿಯರೊಂದಿಗೆ ಸೇರಿ ಬ್ಲ್ಯಾಕ್ ಮೇಲ್ ಮಾಡಿ ಹಣ ವಸೂಲು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿರುವ ಇಲ್ಲಿನ ವಿದ್ಯಾನಗರ ಪೊಲೀಸರು 1 ಲಕ್ಷದ 20 ಸಾವಿರ ನಗದು, ಒಂದು ಕಾರು ಮತ್ತು 6 ಮೊಬೈಲ್ ಗಳನ್ನು ವಶಪಡಿಸಿಕೊಂಡಿದ್ದಾರೆ.

ಹುಬ್ಬಳ್ಳಿಯ ಶಿವರಾಜ್ ಚಂದ್ರ ಪಟ್ಟಣ, ಹಾಸನದ ರಮ್ಯ ಅಲಿಯಾಸ್ ಭೂಮಿಕ, ತುಮಕೂರಿನ ಪವಿತ್ರಾ ಮತ್ತು ಚಿಕ್ಕಮಗಳೂರಿನ ಸುರೇಶ್ ಕುಮಾರ್ ಬಂಧಿತರು.

ಸಾಮಾಜಿಕ ಜಾಲತಾಣದ ಮೂಲಕ ಪರಿಚಯವಾಗಿದ್ದ ಯುವತಿಯೊಂದಿಗೆ ಹೋಂ ಸ್ಟೇನಲ್ಲಿ ಇರುವಾಗ 4 ಜನ ವ್ಯಕ್ತಿಗಳು ತಮ್ಮ ಖಾಸಗಿ ಪೋಟೋ ಸೆರೆ ಹಿಡಿದಿರುವುದಾಗಿ, ರಕ್ಷಣಾ ವೇದಿಕೆಯವರು ಎಂದು ಹೇಳಿ ಬ್ಲಾಕ್ ಮೇಲ್ ಮಾಡಿ 15 ಲಕ್ಷಕ್ಕೆ ಡಿಮ್ಯಾಂಡ್ ಮಾಡಿದ್ದರು. ಹಣ ಕೊಡದೆ ಇದ್ದರೆ ನಿಮ್ಮ ಮನೆಯವರಿಗೆ ಹೇಳುವುದಾಗಿ ಬೆದರಿಸಿ 1.20 ಲಕ್ಷ ರೂ. ಪಡೆದುಕೊಂಡು ಇನ್ನೂ ಉಳಿದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಇದೇ ಆ.11,2022 ರಂದು ಮೋಸಕ್ಕೊಳಗಾದ ವ್ಯಕ್ತಿಯೋರ್ವರು ವಿದ್ಯಾನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು, ದೂರು ನೀಡಿದ ವ್ಯಕ್ತಿಯ ಸಂಬಂಧಿಕರ ಕಡೆಯಿಂದ ಪಡೆದ ಮಾಹಿತಿ ಆಧರಿಸಿ ಚೀತಾ ಗಸ್ತಿನಲ್ಲಿದ್ದ ಪೊಲೀಸರು ಮಾಹಿತಿ ಆಧರಿಸಿ ಸ್ಥಳದಲ್ಲಿ ದಾಳಿ ನಡೆಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಉಪವಿಭಾಗದ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಹಾಗೂ ಕೆಟಿಜೆ ನಗರ ಪೊಲೀಸ್ ಠಾಣೆಯ ಸಿಪಿಐ ಶಶಿಧರ್ ಮಾರ್ಗದರ್ಶನದಲ್ಲಿ ತನಿಖಾಧಿಕಾರಿಗಳಾದ ವಿದ್ಯಾನಗರ ಪೊಲೀಸ್ ಠಾಣೆಯ ಪಿಎಸ್ ಐ ಜಿ.ಎಂ. ರೇಣುಕಾ, ಕಾಂತರಾಜ್ ಹಾಗೂ ಸಿಬ್ಬಂದಿಗಳಾದ ಎಸ್. ನಾಗರಾಜ್, ನಾಗರಾಜ್ ಕೊಲೇರ, ಟಿ. ಮಂಜಪ್ಪ, ಬುಡೇನ್ ವಲಿ, ಗಿರಿಧರ್, ಬಸವರಾಜ್ ಒಳಗೊಂಡ ತಂಡ ಪ್ರಕರಣ ಬೇಧಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮುಂದುವರೆಸಲಾಗಿದೆ.

## ನೆಹರು ಬಿಟ್ಟ ಸರ್ಕಾರ : ಕಾಂಗ್ರೆಸ್ ನಾಯಕರ ತರಾಟೆ

**(5ನೇ ಪುಟದಿಂದ)** ಹುದ್ದೆ ಉಳಿಸಿಕೊಳ್ಳುವ ಕಾರಣಕ್ಕಾಗಿ ಇವರನ್ನೂ ಅವಮಾನಿಸಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಜಾಹೀರಾತಿನಲ್ಲಿ ವಿ.ಡಿ. ಸಾವರ್ಕರ್ ಅವರ ಚಿತ್ರ ಪ್ರಕಟಿಸಿರುವುದನ್ನು ಪ್ರಸ್ತಾಪಿಸಿರುವ ಸಿದ್ದರಾಮಯ್ಯ, ಬ್ರಿಟಿಷರ ಕ್ಷಮೆ ಕೇಳಿ ಜೈಲಿನಿಂದ ಬಿಡುಗಡೆಗೊಂಡ ವಿ.ಡಿ. ಸಾವರ್ಕರ್ ಅವರಿಗೆ ಮೊದಲ ಸಾಲಿನ ಗೌರವ ನೀಡಲಾಗಿದೆ. ಇದೇ ವೇಳೆ ಸ್ವಾತಂತ್ರ್ಯ ಹೋರಾಟದ ಜೊತೆ ಬಹುಜನ ಸಮಾಜದ ಹಿತಾಸಕ್ತಿಯ ರಕ್ಷಣೆಗಾಗಿಯೂ ಹೋರಾಟ ನಡೆಸಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿತ್ರವನ್ನು ಕೊನೆಯ ಸಾಲಿನಲ್ಲಿ ಹಾಕಲಾಗಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ಇತಿಹಾಸ ತಿರುಚುವ ಯತ್ನ ನಡೆಸಲಾಗುತ್ತಿದೆ. ಬೊಮ್ಮಾಯಿ ಅವರಿಂದ ಈ ರೀತಿ ಯತ್ನದ ನಿರೀಕ್ಷೆ ಇರಲಿಲ್ಲ ಎಂದಿದ್ದಾರೆ.

## ವಿಭಜನೆಯ ಕರಾಳ ದಿನಾಚರಣೆಗೆ ಆಕ್ಷೇಪ

**(5ನೇ ಪುಟದಿಂದ)** ಮೊದಲು ಎರಡು ದೇಶಗಳ ಸಿದ್ಧಾಂತ ಪ್ರತಿಪಾದಿಸಿದ್ದರು. ಜಿನ್ನಾ ಅದನ್ನು ಪರಿಪೂರ್ಣಗೊಳಿಸಿದರು ಎಂದು ರಮೇಶ್ ಹೇಳಿದ್ದಾರೆ.

ದೇಶ ವಿಭಜನೆಯನ್ನು ನಾವು ಒಪ್ಪಿಕೊಳ್ಳದೇ ಇದ್ದರೆ, ಭಾರತ ಹಲವು ತುಂಡುಗಳಾಗಿ ಒಡೆಯಲಿದೆ. ಎಲ್ಲವೂ ನಾಶವಾಗಲಿದೆ ಎಂದು ಸರ್ದಾರ್ ಪಟೇಲರು ಹೇಳಿದ್ದರು ಎಂದು ರಮೇಶ್ ನೆನಪಿಸಿದ್ದಾರೆ.

ಆಧುನಿಕ ಕಾಲದ ಸಾವರ್ಕರ್‌ಗಳು ಹಾಗೂ ಜಿನ್ನಾಗಳು ದೇಶವನ್ನು ಒಡೆಯುವ ಪ್ರಯತ್ನ ಮುಂದುವರೆಸಿದ್ದಾರೆ. ನಾವು ಈ ದ್ವೇಷ ರಾಜಕೀಯವನ್ನು ಸೋಲಿಸಲಿದ್ದೇವೆ ಎಂದವರು ಹೇಳಿದ್ದಾರೆ.


## ಪರಿಶಿಷ್ಟ ಜಾತಿಗೆ ಸೇರ್ಪಡೆಗೆ ಒತ್ತಾಯ

**(5ನೇ ಪುಟದಿಂದ)** ಶಾಸಕ ಜಿ.ಕರುಣಾಕರ ರೆಡ್ಡಿಯವರ ಗಮನಕ್ಕೆ ತಂದು ದೋಬಿಘಾಟ್, ಸಮುದಾಯ ಭವನ, ಸಮುದಾಯಕ್ಕೆ ಸಿ.ಎ. ನಿವೇಶನ, ವಿದ್ಯಾರ್ಥಿಗಳಿಗೆ ವಸತಿ ನಿಲಯ ಒದಗಿಸುದಾಗಿ ಹೇಳಿದರು.

ಮಡಿವಾಳ ಸಮಾಜದ ನಗರ ಘಟಕದ ಅಧ್ಯಕ್ಷ ಚಂದ್ರಕಾಂತ, ಭರಮಣ್ಣ, ಕಣಿವೆಹಳ್ಳಿ ಮಂಜುನಾಥ, ಸಿದ್ದಪ್ಪ ರೆಡ್ಡಿ, ನಿಂಗಪ್ಪ, ಕೋಟೆಪ್ಪ, ಅಂಜಿನಪ್ಪ, ಮಜ್ಜಿಗೇರಿ ಬಸವರಾಜ, ಕೃಷ್ಣಮೂರ್ತಿ, ಕರಿಬಸಪ್ಪ, ಹನುಮಂತಪ್ಪ, ರಮೇಶ್, ಬಸವರಾಜ, ಪೃಥ್ವಿರಾಜ, ರೇಖಮ್ಮ ವಿಜಯಲಕ್ಷ್ಮಿ, ರೇಣುಕಮ್ಮ ಸುಧಾ, ಗೀತಮ್ಮ ಸುರೇಶ್ ಇತರರು ಈ ಸಂದರ್ಭದಲ್ಲಿದ್ದರು.

## ಜಿಲ್ಲಾ ಬಿಜೆಪಿ ಮೌನ ಮೆರವಣಿಗೆ


**(5ನೇ ಪುಟದಿಂದ)** ಉಪಾಧ್ಯಕ್ಷ ಮಂಜಾನಾಯ್ಕ, ಶಿವರಾಜ ಪಾಟೀಲ್, ಶ್ರೀನಿವಾಸ ದಾಸಕರಿಯಪ್ಪ, ಪಾಲಿಕೆ ಸದಸ್ಯರಾದ ಎಲ್.ಡಿ. ಗೋಣೆಪ್ಪ, ಎಸ್.ಟಿ.ವೀರೇಶ್, ಕೆ.ಎಂ. ವೀರೇಶ್, ಶಾಂತಕುಮಾರ್, ಶಿವ ಪ್ರಕಾಶ್, ಪ್ರಸನ್ನಕುಮಾರ್, ವೀಣಾ ನಂಜಪ್ಪ, ಜೆ.ಎನ್.ಶ್ರೀನಿವಾಸ್, ಮಾಜಿ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ರಾಜನಹಳ್ಳಿ ಶಿವಕುಮಾರ್ ಇದ್ದರು.

**ಶುಭಾಶಯಗಳು**

75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲಾ ಬಂಧು-ಮಿತ್ರರಿಗೆ ಹೃತ್ಪೂರ್ವಕ ಶುಭಾಶಯಗಳು.

**ಡಿ. ಕೆ. ಸಂಗಮೇಶ್ ಎಲಿಗಾರ್**
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710



**ಶುಭಾಶಯಗಳು**

ನಮ್ಮೆಲ್ಲಾ ಆತ್ಮೀಯ ಬಂಧು-ಮಿತ್ರರಿಗೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹೃತ್ಪೂರ್ವಕ ಶುಭಾಶಯಗಳು.

**ಪವಾಡಪ್ಪ ತಿಪ್ಪೇಸ್ವಾಮಿ**
ದಸ್ತಾವೇಜು ಬರಹಗಾರರು, ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765

**JOB OPENING**

**FIOLTY.Com COMPANY**
**BANKING PROCESS**

Work : Tele Calling Offoice work.
Age : 22 To 28 Years Old Male or Female
Qualification : PUC and Any degree
Languages : KANANDA , TELUGU, TAMIL
Salary : Basic Salary 8000 going Upto 15000 + incentives .
Timing : 9:30 am To 6:30pm (Sunday Holiday)
Address : #78/1P2 G.K COMPLEX
Shamnur Road, Davangere - 577004
M : 96329 72699, 96638 60607


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ದಾವಣಗೆರೆ ಸಿಟಿ ಯಲ್ಲಮ್ಮನಗರ ಕಣಗಳ ನಿವೇಶನಗಳ ಪ್ರದೇಶದಲ್ಲಿ ಈ ಹಿಂದೆ ದಾವಣಗೆರೆ ನಗರಸಭೆಯವರು ವಿಂಗಡಿಸಿದ ಕಣ ಸಂಖ್ಯೆ 14ರ ಪಶ್ಚಿಮದ ಕಡೆಗೆ ಇರುವ ಸೊತ್ತನ್ನು ನನ್ನ ಕಕ್ಷಿಗಾರರಾದ **ಶ್ರೀ ಹೆಚ್.ಕೆ.ಅಣ್ಣಪ್ಪ,** ಇವರು ಕ್ರಯಪತ್ರದ ಮೂಲಕ ಮಾಲೀಕರಾದ **ಶ್ರೀ ಜಗದೀಶ್** ಇವರಿಂದ ಪಡೆದುಕೊಂಡಿರುತ್ತಾರೆ. ಸದರಿ ಕಣದ **ನಿವೇಶನ ಸಂಖ್ಯೆ 14ರ** ಪಶ್ಚಿಮಕ್ಕೆ ಇರುವ ನಿವೇಶನ ಸಂಖ್ಯೆ 13ರ ಮಾಲೀಕರುಗಳು ತಮ್ಮ ಸೊತ್ತು ದಾಖಲೆಗಳಲ್ಲಿ ಹಾಗೂ ವಾಸ್ತವದಲ್ಲಿ **100' X 100'** ಇದ್ದರೂ ಸ್ಥಳದಲ್ಲಿ **125' X 100'** ವಿಸ್ತೀರ್ಣ ಹೊಂದಿದೆಯೆಂದು ಆಧಾರರಹಿತ ಹಕ್ಕು ಹಾಗೂ ಕಲ್ಪನಾಧಾರದಿಂದ ಕೂಡಿದ ಸುಳ್ಳು ಹಕ್ಕು ಸಾಧಿಸುತ್ತಾ, ಸದರಿ ಸೊತ್ತಿನ ಪೂರ್ವದ ಕಡೆಯ **25' X100'** ಆಸ್ತಿಯನ್ನು ತಮ್ಮ ಸೊತ್ತಿನ ಒಂದು ಭಾಗವೆಂದು ಅಕ್ರಮ, ಸುಳ್ಳು ಹಾಗೂ ಕಾನೂನು ಬಾಹಿರ ಹಕ್ಕು ಕೋರುತ್ತಾ ದೌರ್ಜನ್ಯದಿಂದ ತಮ್ಮ ಅಕ್ರಮ ಕೂಟದ ಅನುಚರರೊಂದಿಗೆ ಹಾಗೂ ರಾಜಕೀಯ ಬಲಾಢ್ಯರೊಂದಿಗೆ ಕಾನೂನು ವಿರೋಧಿ ಕೃತ್ಯಗಳನ್ನು ಎಸಗುವ ನಿಟ್ಟಿನಲ್ಲಿ ನಮ್ಮ ಕಕ್ಷಿದಾರರ ಕುಟುಂಬದ ಸದಸ್ಯರ ಮಾಲೀಕತ್ವದ ಕಟ್ಟಡದ ಪಶ್ಚಿಮ ಕಾಂಪೌಂಡ್ ಗೋಡೆಯನ್ನು ಈ ಹಿಂದೆ ದಿನಾಂಕ: 19-1-2019 ರ ಮಧ್ಯ ರಾತ್ರಿ ದೌರ್ಜನ್ಯದಿಂದ ಜೆಸಿಬಿ ಹಾಗೂ ಟಿಪ್ಪರ್ ಲಾರಿಗಳನ್ನು ತಂದು ಒಡೆದು ಹಾಕಿ ನನ್ನ ಕಕ್ಷಿಗಾರರಿಗೆ ಸಾವಿರಾರು ರೂಪಾಯಿ ನಷ್ಟವುಂಟು ಮಾಡಿ, ಇಲ್ಲದ ಹಕ್ಕನ್ನು ಸಾಧಿಸುವ ತರದೂದಿನಲ್ಲಿದ್ದರು. ಆಗ ನನ್ನ ಕಕ್ಷಿದಾರರ ಕುಟುಂಬದ ಸದಸ್ಯರು ಹಾಗೂ ಸೊತ್ತಿನ ಮಾಲೀಕರಾದ **ಶ್ರೀಮತಿ ದೀಪಶ್ರೀ ಕೋಂ. ಹೆಚ್.ಎ. ಸಿದ್ದರಾಜು, ಮತ್ತು ಶ್ರೀ ಹೆಚ್.ಎ. ಸಿದ್ದರಾಜು,** ಬಿನ್ ಹೆಚ್.ಕೆ ಅಣ್ಣಪ್ಪ ಇವರು ಸದರಿ **ಶ್ರೀ ಪಿ. ನಾಗರಾಜ್** ಹಾಗೂ **ಶ್ರೀ ಪಿ.ಎಸ್. ಜಗದೀಶ್** ಇವರುಗಳ ವಿರುದ್ಧ ದಾವಣಗೆರೆಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ **ಅಸಲು ದಾವೆ ಸಂಖ್ಯೆ: 124/2019** ಹೂಡಿ ಹಂಗಾಮಿ ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡಿದ್ದು, ಸದರಿಯವರು ನ್ಯಾಯಾಲಯದಲ್ಲಿ ಹಾಜರಾಗಿದ್ದು, ಅದು ಇನ್ನೂ ಚಾಲ್ತಿಯಲ್ಲಿರುತ್ತದೆ. ಹೀಗಿದ್ದಾಗ್ಯೂ ಸದರಿ **ಶ್ರೀ ಪಿ. ನಾಗರಾಜ್ ಹಾಗೂ ಇತರೆ** ಕೆಲವು ಪಟ್ಟಬದ್ಧ ಹಿತಾಸಕ್ತಿಗಳು ಸೇರಿ ಈಗ್ಗೆ ಹಲವು ದಿನಗಳಿಂದ ನನ್ನ ಕಕ್ಷಿಗಾರರ ಸೊತ್ತಿನ ಪಶ್ಚಿಮಕ್ಕೆ ಇರುವ ತಮ್ಮದಲ್ಲದ ಸೊತ್ತನ್ನು ತಮ್ಮದೆಂದು ಅಕ್ರಮವಾಗಿ ಸಾರುತ್ತಾ, ಅದನ್ನು ಸ್ವಚ್ಛಗೊಳಿಸಿ ಬೇರೆಯವರಿಗೆ ಸುಳ್ಳು ಖೊಟ್ಟಿ ದಾಖಲೆಗಳು ಹಾಗೂ ಅಳತೆಗಳನ್ನು ತೋರಿಸುತ್ತಾ ವಾಸ್ತವದಲ್ಲಿ ಅವರಿಗಿರುವ ಸೊತ್ತಿಗಿಂತ ಹೆಚ್ಚಿನ ಸೊತ್ತನ್ನು ತಮ್ಮದೆಂದು ಅಕ್ರಮವಾಗಿ ಹಾಗೂ ಕಾನೂನು ಬಾಹಿರವಾಗಿ ಹೇಳಿಕೊಳ್ಳುತ್ತಾ ಮಾರಾಟ ಮಾಡುವ ಮೂಲಕ ಸಾರ್ವಜನಿಕರಿಗೆ ತಪ್ಪು ಹಾದಿ ತುಳಿಸಿ ಮೋಸ ಮಾಡುವ ತರದೂದಿನಲ್ಲಿದ್ದಾರೆಂದು ತಿಳಿದು ಬಂದಿರುತ್ತದೆ. ಈ ರೀತಿ ಮಾಡಲು ಸದರಿಯವರಿಗೆ ಯಾವುದೇ ಹಕ್ಕು, ಸ್ವಾಧೀನ ಅಧಿಕಾರವಿರುವುದಿಲ್ಲ. ಕಾರಣ ಸಾರ್ವಜನಿಕರು ಯಾರೂ ಸದ್ರಿ **ಶ್ರೀ ಪಿ. ನಾಗರಾಜ್ ಬಿನ್ ಲೇಟ್ ಶ್ರೀ ಪಲ್ಲಾಗಟ್ಟಿ ಶಂಕರಪ್ಪ** ಹಾಗೂ ಅವರ ಸೋದರ ಸಂಬಂಧಿಗಳ ಜೊತೆಗೆ ಈ ಬಗ್ಗೆ ಯಾವುದೇ ವ್ಯವಹರಣೆಯನ್ನು ಮಾಡಬಾರದು.

ಹಾಗೊಂದು ವೇಳೆ ಮೇಲ್ಕಂಡ ಸೊತ್ತಿನ ಬಗ್ಗೆ ಯಾವುದೇ ರೀತಿ ವ್ಯವಹರಣೆ ಮಾಡಿದಲ್ಲಿ ಅವರೇ ತಪ್ಪಿತಸ್ಥರು ಹಾಗೂ ಜವಾಬ್ದಾರರಾಗಿರುತ್ತಾರೆ ಹಾಗೂ ಮೇಲ್ಕಂಡ ಸೊತ್ತಿನ ಬಗ್ಗೆ ಯಾವುದೇ ರೀತಿಯ ಯಾವುದೇ ವ್ಯವಹರಣೆ ಅಕ್ರಮ ಮತ್ತು ಕಾನೂನು ಬಾಹಿರ. ಹಾಗಾಗಿ ಅವು ನನ್ನ ಕಕ್ಷಿದಾರರಿಗೆ ಹಾಗೂ ಅವರ ಆಸ್ತಿಗಳಿಗೆ ಯಾವುದೇ ರೀತಿಯಿಂದಲೂ ಪ್ರತಿಬಂಧಿಸುವುದಿಲ್ಲವೆಂದು ಹಾಗೂ ಬಾಧಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಅಷ್ಟೇ ಅಲ್ಲದೇ, ಸದರಿ ಶ್ರೀ ಪಿ. ನಾಗರಾಜ್ ಹಾಗೂ ಇತರೆಯವರು ತಮ್ಮ ಹಿಂಬಾಲಕರೊಂದಿಗೆ ನಿವೇಶನ ಸಂಖ್ಯೆ 13 ರ ಮಾಲೀಕರೆಂದು ಹೇಳಿಕೊಳ್ಳುತ್ತಾ ಅವರ ನಿವೇಶನದ ದಾಖಲೆಗಳ ಅಳತೆಗಿಂತ ಹೆಚ್ಚಿನ ಅಳತೆಯ ನಿವೇಶನವನ್ನು ತಮ್ಮದೆಂದು ಅಕ್ರಮವಾಗಿ ಬಿಂಬಿಸುತ್ತಾ, ಸಾರ್ವಜನಿಕರನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ. ಸದರಿ ನಿವೇಶನದ ಬಗ್ಗೆ ಈ ಹಿಂದೆಯೇ ಕರ್ನಾಟಕದ ಉಚ್ಚ ನ್ಯಾಯಾಲಯದ **ರಿಟ್ ಅರ್ಜಿ ಸಂಖ್ಯೆ W.P No. 12739/08** ಹಾಗೂ **WA 536/2009** ರಲ್ಲಿ ತೀರ್ಮಾನವಾಗಿದ್ದರೂ ಸಹ, ಕೇವಲ ಕಲ್ಪನೆಯಿಂದ, ಅಕ್ರಮವಾದ ಹಕ್ಕುಗಳನ್ನು ಮುಂದೊಡ್ಡಿ ಮೇಲ್ಕಂಡಂತೆ ಅಕ್ರಮ ಎಸಗಲು ಹೊರಟಿರುವ ಕಾರಣ, ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಯಾರೂ ಸದರಿ ಕಣದ ನಿವೇಶನ ಸಂಖ್ಯೆ 13 ರ ಪೂರ್ವದ ಕಡೆಗೆ ಮೇಲೆ ಹೇಳಿದ ಮಾಲೀಕರು ಹೇಳುವಂತೆ **25' X100'** ಆಸ್ತಿಯನ್ನು ಅಳತೆಯ ಆಸ್ತಿ ಸ್ಥಳದಲ್ಲಿಲ್ಲದ್ದರ ಕಾರಣ ಸದರಿಯವರೊಂದಿಗೆ ವ್ಯವಹರಿಸಿ, ತೊಂದರೆಗೆ ಹಾಗೂ ಮೋಸಕ್ಕೆ ಒಳಗಾಗಬಾರದೆಂದು ಈ ಮೂಲಕ ಎಚ್ಚರಿಸಲಾಗಿದೆ. ಈ ಬಗ್ಗೆ ಈ ಹಿಂದೆ ಇದೇ ಪತ್ರಿಕೆಯಲ್ಲಿ ದಿನಾಂಕ 24.9.2021ರಂದು ಒಂದು ಪ್ರಕಟಣೆ ನೀಡಲಾಗಿತ್ತು

**ದಾವಣಗೆರೆ**
**ದಿನಾಂಕ: 14.08.2022**

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್ ಎಲ್ .ಎಂ.
ವಕೀಲರು, ನಂ.5 & 6, 1ನೇ ಅಂತಸ್ತು, ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006.

